**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰھُمَّ اَیِّدْ اِمَامَنَا بِرُوْحِ الْقُدُسِ وَبَارِکْ لَنَا فِیْ عُمُرِہٖ وَاَمْرِہٖ

بِسْمِ اللّٰہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَکُمُ اللّٰہُ بِبَدْرٍ وَّاَنْتُمْ اَذِلَّۃٌ

ವರ್ಷ: 01

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 28

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

23 ಜುಲೈ 2020, 23 ವಫಾ 1399 ಹಿಜರಿ ಶಮ್‌ಸಿ,
01 ಝುಲ್–ಹಜ್ಜ್ 1441 ಹಿಜರಿ ಖಮರಿ.


**ಅಲ್ಲಾಹನ ಉಪದೇಶ**

یُرِیْدُ اللّٰہُ لِیُبَیِّنَ لَکُمْ وَیَھْدِیَکُمْ سُنَنَ الَّذِیْنَ مِنْ قَبْلِکُمْ وَیَتُوْبَ عَلَیْکُمْ ؕ وَاللّٰہُ عَلِیْمٌ حَکِیْمٌ ○

(ಅನ್ನಿಸಾಅ್:27)

ಅಂದರೆ: ನಿಮ್ಮ ಪೂರ್ವಿಕರ ಮಾರ್ಗಗಳನ್ನು ನಿಮಗೆ ವಿವರಿಸಿಕೊಡಲಿಕ್ಕೂ (ಅದರೆಡೆಗೆ) ನಿಮ್ಮನ್ನು ನಡೆಸಿಕೊಂಡು ಹೋಗಲಿಕ್ಕೂ ನಿಮ್ಮ ಮೇಲೆ ಕರುಣೆ ತೋರಿಸಲಿಕ್ಕೂ ಅಲ್ಲಾಹನು ಬಯಸುತ್ತಾನೆ. ಅಲ್ಲಾಹನು ಸರ್ವಜ್ಞನೂ ವಿವೇಕಶಾಲಿಯೂ ಆಗಿದ್ದಾನೆ.

**ಪಾಪಗಳಿಂದ ದೂರ ಅಲ್ಲಾಹನ ಶಿಕ್ಷಿಸುವ ಭಯದಿಂದ ದೊರೆಯುತ್ತದೆ. ಆದರೆ ಏಸು ನಮ್ಮ ಪಾಪಗಳ ಭಾರ ಹೊತ್ತುಕೊಂಡಿದ್ದಾನೆ (ವಹಿಸಿಕೊಂಡಿದ್ದಾನೆ) ಎಂದು ನಂಬಿಕೊಂಡಿದ್ದರೆ ಆ ಶಿಕ್ಷಿಸುವ ಭಯ ಬರಲು ಹೇಗೆ ಸಾಧ್ಯ.**

**ಈ ತತ್ವದ ಪರಿಣಾಮವು ವಾಸ್ತವವಾಗಿ ಭಯಂಕರವಾದುದಾಗಿದೆ. ಯೂರೋಪ್ ದೇಶಗಳಲ್ಲಿ ಅಷ್ಟೊಂದು ಯತೇಚ್ಚ ರೀತಿಯಲ್ಲಿ ಅನೈತಿಕ ಕಾರ್ಯಗಳು ಉಂಟುಗುತ್ತಿರಲಿಲ್ಲ ಅಲ್ಲದೆ ಈಗ ಬಂದ ಹಾಗೆ ವ್ಯಭಿಚಾರದ ಪ್ರವಾಹ ಬರುತ್ತಿರಲಿಲ್ಲ.**

**ನಾವು ತತ್ವವನ್ನೇ ನೋಡುವೆವು. ನಮ್ಮ ತತ್ವಗಳಲ್ಲಿ ಬರೆಯಲಾಗಿದೆ. "ಫಮೈಯಾಮಲ್ ಮಿಸ್‌ಖಾಲ ಝುರ್ರತಿನ ಖೈರೈಯ್ಯರ". (ಅಲ್ ಝಿಲ್‌ಝಾಲ್: 08)**
**ಇದರ ಪ್ರಭಾವ ಯಾವ ರೀತಿ ಬೀರಬಹುದು ಎಂಬುದನ್ನು ನೀವು ಸ್ವಯಂ ಯೋಚಿಕೊಳ್ಳಿ. ಅದೇನೆಂದರೆ ಮನುಷ್ಯನು ಕರ್ಮದ ಪ್ರಾಮುಖ್ಯತೆ ತಿಳಿಯುವನು ಮತ್ತು ಸತ್ಕರ್ಮಗೈಯಲು ಪ್ರಯತ್ನಪಡುವನು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಪಾಪ ಪರಿಹಾದ ಮೇಲೆ ವಿಶ್ವಾಸ ಹೊಂದಿದ ಕಾರಣ ಮನುಷ್ಯನು ಪಾಪ ಮಾಡಲು ಶೂರನಾಗುತ್ತಾನೆ.

ಯಾರಾದರು ಪಾಪ ಪರಿಹಾರ ವಿಶ್ವಾಸದಿಂದ, ಮನುಷ್ಯನ ಪಾಪ ಜೀವನದಿಂದ ಮುಕ್ತಿ ದೊರೆಯುತ್ತದೆ ಮತ್ತು ಪಾಪ ಮಾಡುವ ಶಕ್ತಿ ಅವನಲ್ಲಿರುವುದಿಲ್ಲ ಎಂದಾದರೆ ಇದೊಂದು ಆಧಾರ ರಹಿತ ಮಾತಾಗುತ್ತದೆ. ಏಕೆಂದರೆ ಆ ತತ್ವದಡಿಯಲ್ಲಿಯೇ ಪಾಪ ಅಡಗಿದೆ. ಪಾಪಗಳಿಂದ ದೂರ ಉಳಿಯುವ ಶಕ್ತಿಯು ಅಲ್ಲಾಹನ (ದೇವನ) ಶಿಕ್ಷಿಸುವ ಭಯದಿಂದ ದೊರೆಯುತ್ತದೆ. ಆದರೆ ಏಸು ನಮ್ಮ ಪಾಪಗಳ ಭಾರ ಎತ್ತಿಕೊಂಡಿದ್ದಾರೆ (ವಹಿಸಿಕೊಂಡಿದ್ದಾರೆ) ಎಂದು ನಂಬಿದರೆ ಆ ಶಿಕ್ಷಸುವ ಭಯ ಹೇಗೆ ಬರಲು ಸಾಧ್ಯ? ಈ ತತ್ವದಿಂದ ನಾವು ಏನು ಪರಿಣಾಮ ಪಡೆಯಬಹುದೆಂದರೆ ಇಂತಹ ಮನುಷ್ಯನು ಎಂದೂ ಭಯಭಕ್ತಿಯುಳ್ಳವನಾಗಲು ಸಾಧ್ಯವಿಲ್ಲ. ಏಕೆಂದರೆ ಆತನು ಭಯಭಕ್ತಿ ಆಧರಿತ ಕಾರ್ಯಗಳನ್ನು ಅನುಸರಿಸುವುದು ಅನಿವಾರ್ಯ ಎಂದು ಭಾವಿಸುವುದಿಲ್ಲ. ಇದನ್ನು ಚೆನ್ನಾಗಿ ನೆನಪಿಡಿರಿ ಆತ್ಮ ಶುಧ್ಧಿಯು ಯಾವಾಗಲು ತತ್ವಧಾರಿತವಾಗಿರುತ್ತದೆ...

ಮತ್ತು ನಾವು ನೋಡುವುದೇನೆಂದರೆ ಪಾಪಪರಿಹಾರ (ಕಫ್ಫಾರ) ನಂಬುವವರು ಆತ್ಮಶುಧ್ಧಿಯ ಯಾವ ಕಾರ್ಯದ ಉದಾಹರಣೆಗಳನ್ನು ಸ್ಥಾಪಿಸಿದ್ದಾರೆ? ಯುರೋಪಿನ ದುಷ್ಕರ್ಮಗಳು ಎಲ್ಲರಿಗೂ ತಿಳಿದಿರುವಂತಹದ್ದೆ. ಮದ್ಯಪಾನವು ಅಫರಾಧಗಳ ಮೂಲ ಮತ್ತು ದುಷ್ಕರ್ಮಗಳ ಮೂಲವಾಗಿದೆ. ಅದನ್ನು ಯೋರೋಪಿನಲ್ಲಿ ಯಾವ ರೀತಿ ಯಥೇಚ್ಚವಾಗಿ ಬಳಸುತ್ತಾರೆ ಎಂದರೆ ಅದರ ಉದಾಹರಣೆ ಇನ್ನೊಂದು ದೇಶದಲ್ಲಿ ಸಿಗುವುದಿಲ್ಲ. ನಾನು ವಾರ್ತ ಪತ್ರಿಕೆಯಲ್ಲಿ ಒಮ್ಮೆ ಒದಿದ್ದೆ ಲಂಡನ್ನಿನ ಮದ್ಯದಂಗಡಿಗಳನ್ನು ಒಂದು ನಾವೆಯಲ್ಲಿ ಇಟ್ಟರೆ ಆ ಸಾಲು 75 ಮೈಲಷ್ಟು ಉದ್ದ ಹೋಗಬಹುದು ಎಂದು. ಯಾವ ರೀತಿಯಲ್ಲಿ ಅವರಿಗೆ ಈ ಶಿಕ್ಷಣ ನೀಡಲಾಗಿದೆ ಎಂದರೆ ಅವರಿಗೆ ಪಾಪ ಮೋಕ್ಷದ ಪ್ರಮಾಣ ಪತ್ರ ನೀಡಲಾಗಿದೆ. ಅವರು ಏನೇ ಪಾಪಗಳನ್ನು ಮಾಡಿದರೂ ಅದು ಕ್ಷಮಿಸಿರುವುದಾಗಿ ಎಂದು. ಈಗ ಕ್ರೈಸ್ತರು ಯೋಚಿಸಿ ನಮಗೆ ಉತ್ತರ ನೀಡಲಿ ಅದರ ಮರಿಣಾಮ ಏನಾಗಬಹುದೆಂದು.

ನೌಝುಬಿಲ್ಲಾಹ್ ಒಂದು ವೇಳೆ ನಮ್ಮ ತತ್ವಗಳು ಹೀಗಿರುತ್ತಿದ್ದರೆ ನಮ್ಮ ಮೇಲೆ ಅದರ ಬಹಳಷ್ಟು ದುಷ್ಫರಿಣಾಮಗಳಾಗುತ್ತಿದ್ದವು. ದುಷ್ಪ್ರೇರಕ ಆತ್ಮವೂ ಮೊದಲೇ ಕೆಡುಕು ಮಾಡಲು ಪ್ರೇರೇಪಿಸುತ್ತದೆ. ಉದಾಹರಣೆಗೆ ಶಿಯಾಗಳು ಇಮಾಮ್ ಹುಸೇನ್[ರ] ರವರ ಆಶ್ರಯ ಪಡೆದುಕೊಂಡಿದ್ದಾರೆ ಮತ್ತು ಧರ್ಮನಿಷ್ಠೆ ಎಂದು ಅವರು ಏನು ಹೇಳಿದರೂ ಅದು ಕಡಿಮೆಯೇ ಸರಿ. ನಾನು ಆ ಧರ್ಮನಿಷ್ಠೆ (ತಖಿಯ) ಮತ್ತು ಇಮಾಮ್ ಹುಸೇನ್[ರ] ರವರ ಪರಹಾರ ತತ್ವ ಮುಂದಿಟ್ಟುಕೊಂಡು ಧೈರ್ಯದಿಂದ ಹೇಳಬಲ್ಲೆನು. ಶಿಯಾಗಳಲ್ಲಿ ಭಯಭಕ್ತಿಯುಳ್ಳವರು ತೀರ ಕಡಿಮೆ ಸಂಖ್ಯೆಯಲ್ಲಿರುವರು. ಖಲೀಫ ಮುಹಮ್ಮದ್ ಹಸನ್ ಸಾಹೇಬ್ ಬರೆದಿದ್ದಾರೆ. **"ಫದೈನಾಹು ಬಿಝಿಬ್‌ಹಿನ್ ಅಝೀಮ್"** (ಅಸ್ಸಾಫ್ಫಾತ್:108) ಪವಿತ್ರ ಖುರ್‌ಆನಿನಲ್ಲಿ ಬಂದಿರುವುದು. ಅದು ಇಮಾಮ್ ಹುಸೇನರ ಶಹಾದತ್‌ನ ಬಗ್ಗೆ ಆಗಿರುತ್ತದೆ ಮತ್ತು ಈ ಸೂಕ್ಷ್ಮ ವಿಷಯದ ಮೇಲೆ ಪವಿತ್ರ ಖುರ್‌ಆನಿನ ತಿರುಳನ್ನೇ ಪಡೆದಿದ್ದೇವೆ ಎಂದು ಸಂತುಷ್ಟರಾಗುತ್ತಾರೆ.

ಅವರ ಈ ಸೂಕ್ಷ್ಮ ಗ್ರಹಿಕೆಯನ್ನು ನೋಡಿದಾಗ ನನಗೆ ಪೂಸ್ತಿಯ ಒಂದು ಕಥೆ ನೆನಪಾಯಿತು ಅದೇನೆಂದರೆ ಒಬ್ಬ ಪೂಸ್ತಿಯ ಬಳಿ ಒಂದು ಲೋಟವಿತ್ತು ಮತ್ತು ಅದರಲ್ಲಿ ರಂಧ್ರವಾಗಿತ್ತು. ಅವನು ಬಹಿರ್ದೆಸೆಗೆ ಹೋದಾಗ ಅವನು ನೀರು ಉಪಯೋಗಿಸುವ ಮುಂಚೆಯೇ ಲೋಟದಿಂದ ಎಲ್ಲಾ ನೀರು ಚೆಲ್ಲಿ ಹೋಗುತಿತ್ತು. ಎಷ್ಟೋ ದಿನಗಳ ಆಲೋಚನೆಯ ನಂತರ ಅವನು ಒಂದು ಯುಕ್ತಿ ಯೋಚಿಸಿಕೊಂಡನು ಅದೇನೆಂದರೆ ಮೊದಲು ತೊಳೆದುಕೊಂಡೆ ಬಹಿರ್ದೆಸೆಗೆ ಕುಳಿತು ಕೊಳ್ಳಬೇಕು. ತಮ್ಮ ಈ ಯುಕ್ತಿಯ ಮೇಲೆ ತುಂಬ ಸಂತೋಷಗೊಂಡನು. ಅದೇ ತರಹದ ಮಂತ್ರ ಮತ್ತು ಯುಕ್ತಿ ಅವರಿಗೆ ದೊರೆತಿದೆ. ಅದನ್ನು ಅವರ **"ಫದೈನಾಹು ಬಿಝಿಬ್‌ಹಿನ್ ಅಝೀಮ್"** (ಅಸ್ಸಾಫ್ಫಾತ್:108) ತಾತ್ಪರ್ಯ. ಇಮಾಮ್ ಹುಸೇನರ ಶಹಾದತ್ ಆಗಿದೆ ಎಂದು ಶಿಯಾ ಜನರ ಮಸೀದಿಗಳು ಸಹ ಸ್ವಚ್ಛವಾಗುವುದಿಲ್ಲ. ನಾವು ಒಬ್ಬ ಶಿಯಾ ಉಸ್ತಾದ್‌ನಿಂದ ಕಲಿಯುತ್ತಿದ್ದೆವು ಅಲ್ಲಿ ನಾಯಿಗಳು ಮೂತ್ರ ವಿಸರ್ಜನೆ ಹಾಗೂ ಪಾಯಿಖಾನೆ ಮಾಡುತಿದ್ದವು. ಅಲ್ಲಿ ಎಂದಾದರು ನಮಾಝ್ ಮಾಡಿರಬಹುದುದೆಂದು ನನಗೆ ಅನಿಸುವುದಿಲ್ಲ. ಶಿಯಾ ಅವರ ನಿಲುವು ಇದೇ ಆಗಿದೆ. "ಇಮಾಮ್ ಹುಸೇನ್[ರ] ಮತ್ತು ಅಹ್ಲೆಬೈಯತ್ (ಕುಟುಂಬ ಸದಸ್ಯರು) ನಮಗಾಗಿ ಶಹೀದ್ ಆಗಿರುವರು. ಅವರ ದುಃಖದಲ್ಲಿ ಅಳುವುದು

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಪ್ರಾರಂಭದ ಕಾಲದ ಈ ಸಹಾಬರವರ ಬಲಿದಾನಗಳನ್ನು ಎದುರಿಸಲು ಯಾರಿಂದಲೂ ಸಾಧ್ಯವಿಲ್ಲ.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ದುರ್ರಹ್ಮಾನ್ ಬಗ್ಗೆ ಹೇಳಿದರು: ಅವರು ಮುಸ್ಲಿಮರ ಮುಖಂಡರ ಮುಖಂಡರಾಗಿರುವರು. ಅವರು ಹೀಗೆ ಸಹ ಹೇಳಿದರು: ಅಬ್ದುರ್ರಹ್ಮಾನ್ ಆಕಾಶದಲ್ಲಿಯೂ ಅಮೀನ್ ಆಗಿದ್ದಾರೆ ಭೂಮಿಯಲ್ಲಿಯೂ ಅಮೀನ್ ಆಗಿದ್ದಾರೆ.

ಉಹುದ್ ದಿನದಂದು ಜನರ ಹೆಜ್ಜೆಗಳು ಅಸ್ಥಿರವಾದಾಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸ್ಥಿರವಾಗಿ ನಿಂತರು.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ಹಿಂದೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಮಾಝ್ ನಿರ್ವಹಿಸಿದ ಸೌಭಾಗ್ಯಗಳಿಸಿದರು.
......ನಬಿ ತನ್ನ ಜೀವಿತ ಕಾಲದಲ್ಲಿ ತನ್ನ ಸಮುದಾಯದ ಒಬ್ಬ ಸಾತ್ವಿಕನಾದ ಮನುಷ್ಯನ ಹಿಂದೆ ನಿಂತು ನಮಾಝ್ ನಿರ್ವಹಿಸುವರು ಎಂದು ಸಹ ಹೇಳಿದರು.

ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.

ಅಶರ ಮುಬಶ್ಶರ ಎಂದರೆ ಜೀವಿತ ಕಾಲದಲ್ಲಿಯೇ ಸ್ವರ್ಗ ಸಿಗುವುದರ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಶುಭವಾರ್ತೆ ಗಳಿಸಿದ ಹತ್ತು ಜನರಲ್ಲಿ ಒಬ್ಬರಾಗಿದ್ದರು. ಆದರೆ ಅವರಿಗೆ ಅಲ್ಲಾಹನ ಬಗ್ಗೆ ಭಯ ಎಷ್ಟಿತ್ತೆಂದರೆ ಅವರು ಯಾವಾಗಲೂ ಚಿಂತಾಮಗ್ನರಾಗಿರುತ್ತಿದ್ದರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ವಿಷಯಕ್ಕೆ ಸಂಬಂಧಿಸಿ ಹೀಗೆ ಹೇಳಿದುದನ್ನು ನಾನು ಆಲಿಸಿದ್ದೇನೆ. ನೀವು ಯಾವುದಾದರೂ ಪ್ರದೇಶದ ಬಗ್ಗೆ ಅಲ್ಲಿ ಸಾಂಕ್ರಾಮಿಕ ರೋಗ ಹಬ್ಬಿದೆ ಎಂದು ತಿಳಿದರೆ ಅಲ್ಲಿಗೆ ಹೋಗಬೇಡಿರಿ. ನೀವು ವಾಸಿಸುವ ಸ್ಥಳದಲ್ಲಿ ಸಾಂಕ್ರಾಮಿಕ ರೋಗ ಪ್ರಾರಂಭವಾದರೆ ನೀವು ಅಲ್ಲಿಂದ ಹೊರಗೆ ಪಲಾಯನ ಮಾಡಬೇಡಿರಿ. ಎಂದರೆ, ಎಲ್ಲಿ ಸಾಂಕ್ರಾಮಿಕ ರೋಗ ಹಬ್ಬಿದೆಯೋ ಅಲ್ಲಿಗೆ ನೀವು ಹೋಗಬಾರದು. ನೀವು ವಾಸಿಸುವ ಸ್ಥಳದಲ್ಲಿ ಸಾಂಕ್ರಾಮಿಕ ರೋಗ ಇದ್ದರೆ ಅಲ್ಲಿಂದ ನೀವು ಹೊರಗೆ ಹೋಗಬಾರದು. ನೀವು ಅಲ್ಲಿಯೇ ಇರಬೇಕು.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19–06–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರ ಬಗ್ಗೆ ಪ್ರಸ್ತಾಪಿಸಿದ್ದೆ. ಅದರ ಸ್ವಲ್ಪ ಭಾಗ ಉಳಿದಿತ್ತು. ಇಂದು ಸಹ ಅದನ್ನು ವಿವರಿಸುವೆನು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ಉಮಯ್ಯ ಬಿನ್ ಖಲಫ್ ಅವರೊಂದಿಗೆ ಹಳೆಯ ಸ್ನೇಹ ಸಂಬಂಧವಿತ್ತು. ಇದರ ಬಗ್ಗೆ ಬುಖಾರಿಯಲ್ಲಿ ಒಂದು ಘಟನೆ ಪ್ರಸ್ತಾಪಿಸಲಾಗಿದೆ. ಅದರಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳುತ್ತಾರೆ: ಒಮ್ಮೆ ನಾನು ಉಮಯ್ಯ ಬಿನ್ ಖಲಫ್‌ಗೆ ಒಂದು ಪತ್ರ ಬರೆದೆ ನನ್ನ ಮಕ್ಕದಲ್ಲಿರುವ ಸಂಪತ್ತಿಗೆ ರಕ್ಷಣೆ ನೀಡಿರಿ ಹಾಗೂ ನಾನು ತಮ್ಮ ಮದೀನದಲ್ಲಿರುವ ಸಂಪತ್ತನ್ನು ರಕ್ಷಣೆ ಮಾಡುವೆನು ಎಂದು ಬರೆದೆನು. ನಾನು ನನ್ನ ಹೆಸರು ಅಬ್ದುರ್ರಹ್ಮಾನ್ ಎಂದು ಬರೆದಾಗ ಉಮಯ್ಯ ಹೇಳಿದನು ನನಗೆ ಅಬ್ದುರ್ರಹ್ಮಾನ್ ಯಾರೆಂದು ಪರಿಚಯವಿಲ್ಲ. ನೀವು ನನಗೆ ನಿಮ್ಮ ಅಜ್ಞಾನ ಕಾಲದ ಆ ಹೆಸರನ್ನು ತಿಳಿಸಿರಿ. ಅದಕ್ಕೆ ನಾನು ನನ್ನ ಹೆಸರು ಅಬ್ದೆ ಉಮರ್ ಎಂದು ಬರೆದೆ. ಆತನು ಬದರ್ ಯುದ್ಧದಲ್ಲಿದ್ದಾಗ ನಾನು ಜನರು ಮಲಗಿದ್ದಾಗ ಒಂದು ಬೆಟ್ಟದ ಕಡೆ ಆತನಿಗೆ ರಕ್ಷಣೆ ನೀಡಲು ಹೋದೆನು. ಆಗ ಬಿಲಾಲ್(ರ) ರವರು ಅವನನ್ನು ನೋಡಿದರು. ತದನಂತರ ಬಿಲಾಲ್(ರ) ಕೆಲ ಅನ್ಸಾರ್ ಸಹಾಬರ ಒಂದು ಸಭೆಯಲ್ಲಿ ನಿಂತು ಹೇಳಿದರು ಇವರು ಉಮಯ್ಯ ಬಿನ್ ಖಲಫ್ ಆಗಿದ್ದಾನೆ. ಒಂದು ವೇಳೆ ಇತನು ಉಳಿದುಕೊಂಡರೆ ನನಗೆ ತೊಂದರೆ ನೀಡುವನು. ಇದಕ್ಕೆ ಹಝ್ರತ್ ಬಿಲಾಲ್(ರ) ರವರ ಸಂಗಡಿಗರು ನಮ್ಮ ಅಂದರೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಓಫ್(ರ) ಮತ್ತು ಉಮಯ್ಯ ಬಿನ್ ಖಲಫ್‌ನನ್ನು ಹಿಂಬಾಲಿಸಿದರು. ಏಕೆಂದರೆ ಇವರು (ಅಬ್ದುರ್ರಹ್ಮಾನ್ ಬಿನ್ ಔಫ್(ರ)) ಆತನನ್ನು (ಉಮಯ್ಯ ಬಿನ್ ಖಲಫ್) ರಕ್ಷಣೆ ನೀಡಲು ಹೊರಟರು. ಅವರು ಹೇಳುತ್ತಾರೆ: ಅವರೆಲ್ಲರು ನಮ್ಮನ್ನು ಹಿಡಿದುಬಿಡಬಹುದು ಎಂದು ನನಗೆ ಭಯವಾಯಿತು. ಆದ್ದರಿಂದ ನಾನು ಆತನ ಪುತ್ರನನ್ನು ಹಿಂದೆಯೇ ಬಿಟ್ಟೆನು. ಹೀಗೆ ಅವರೆಲ್ಲರು ಈತನೊಂದಿಗೆ ಯುದ್ಧದಲ್ಲಿ ನಿರತರಾಗಿರಲಿ ಎಂದು. ಅಂದರೆ ಆ ಮುಸ್ಲಿಮರು ಈತನ ಪುತ್ರನೊಂದಿಗೆ ಯುದ್ಧದಲ್ಲಿ ನಿರತರಾಗಿರಲಿ ಹೀಗೆ ನಾನು ಇನ್ನು ಮುಂದೆ ಪ್ರಯಾಣಿಸಬಹುದು. ತದನಂತರ ಮುಸ್ಲಿಮರು ಆತನ ಪುತ್ರನನ್ನು ಕೊಂದು ಹಾಕಿದರು. ಅನಂತರ ಅವರೆಲ್ಲರು ಮತ್ತೆ ನಮ್ಮನ್ನು ಹಿಂಬಾಲಿಸಿದರು. ಉಮಯ್ಯ ದಪ್ಪ ಮೈಕಟ್ಟಿನ ವ್ಯಕ್ತಿ ಆಗಿದ್ದರಿಂದ ಆತನು ಬೇಗನೆ ಅಲ್ಲಿಂದ ಹೋಗಲು ಸಾಧ್ಯವಾಗಲಿಲ್ಲ. ಕೊನೇಗೆ ಅವರೆಲ್ಲರು ನಮ್ಮನ್ನು ಹಿಡಿದರು. ಆಗ ನಾನು ಆತನಗೆ ಕುಳಿತುಕೊ ಎಂದು ಹೇಳಿದಾಗ ಆತನು ಕುಳಿತುಕೊಂಡನು. ನಾನು ಆತನನ್ನು ರಕ್ಷಿಸಲು ಪ್ರಯತ್ನಿಸಿದೆ. ಆದರೆ ಅವರಲ್ಲಿ ಓರ್ವನು ತನ್ನ ಖಡ್ಗವನ್ನು ನನ್ನ ಕೆಳಭಾಗದಿಂದ ಹಾಕಿ ಆತನನ್ನು ಕೊಂದು ಹಾಕಿದನು. ಅವರಲ್ಲಿ ಓರ್ವನ ಖಡ್ಗದಿಂದ ನನ್ನ ಕಾಲಿಗೆ ಗಾಯವಾಯಿತು. (ಸಹೀಹ್ ಬುಖಾರಿ, ಕಿತಾಬುಲ್ ಮಕಾಲ, ಹದೀಸ್–2301)

ತಾರೀಖೆ ತಿಬರಿ ಎಂಬ ಗಂಥದಲ್ಲಿ ಈ ಘಟನೆಯನ್ನು ಇನ್ನಷ್ಟು ವಿವರಾತ್ಮಕವಾಗಿ ವಿವರಿಸಲಾಗಿದೆ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಓಫ್(ರ) ಹೇಳುತ್ತಾರೆ ಮಕ್ಕದಲ್ಲಿ ಉಮಯ್ಯ ಬಿನ್ ಖಲಫ್ ಎಂಬ ಸ್ನೇಹಿತನಿದ್ದನು. ಆಗ ನನ್ನ ಹೆಸರು ಅಬ್ದ್ ಉಮರೋ ಎಂದಾಗಿತ್ತು. ಮಕ್ಕದಲ್ಲಿ ನಾನು

ಇಸ್ಲಾಮ್ ಸ್ವೀಕರಿಸಿದಾಗ ನನ್ನ ಹೆಸರು ಅಬ್ದುರ್ರಹ್ಮಾನ್ ಎಂದಿರಿಸಲಾಯಿತು. ತದನಂತರ ಆತನು ನನ್ನನ್ನು ಭೇಟಿಯಾದಾಗ ಹೀಗೆ ಹೇಳುತ್ತಿದ್ದನು ಎಲ್ಲೈ ಅಬ್ದೆ ಉಮರ್!! ನೀನು ನನ್ನ ತಂದೆ ಇರಿಸಿದ ಹೆಸರನ್ನು ತ್ಯಜಿಸುತ್ತಿರುವೆಯಾ? ಇದಕ್ಕೆ ನಾನು ಉತ್ತರಿಸಿದೆ ಹೌದು. ಇದಕ್ಕೆ ಮತ್ತೆ ಆತನು ಹೇಳುತ್ತಿದ್ದನು ನಾನು ರಹ್ಮಾನ್‌ನನ್ನು ಗುರುತಿಸುವುದಿಲ್ಲ. ನೀವು ಬೇರೆಯಾವುದಾದರು ಹೆಸರನ್ನು ಇರಿಸಿಕೊಳ್ಳುವುದು ಉತ್ತಮವಾಗಿರುವುದು ಹೀಗೆ ನಾನು ಆ ಹೆಸರಿನಿಂದ ನಿಮ್ಮನ್ನು ಕರಿಯುವೆನು ಏಕೆಂದರೆ ನೀವು ನಿಮ್ಮ ಹಳೆಯ ಹೆಸರಿನಂದ ಕರೆದರೆ ಕೇಳಿಸಿಕೊಳ್ಳುವುದಿಲ್ಲ ಮತ್ತು ನಾನು ಯಾವ ವಿಷಯವನ್ನು ತಿಳಿಯುವುದಿಲ್ಲವೋ ಆ ಹೆಸರಿನಿಂದ ನಾನು ನಿಮ್ಮನ್ನು ಕರೆಯುವುದಿಲ್ಲ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳುತ್ತಾರೆ ಆತನು ನನಗೆ "ಎಲ್ಲೈ ಅಬ್ದೆ ಉಮರ್!" ಎಂದು ಕರೆದಾಗ ನಾನು ಆತನಿಗೆ ಉತ್ತರಿಸುತ್ತಿರಲಿಲ್ಲ. ನಾನು ಹೇಳಿದೆ ಎಲ್ಲೈ ಅಬು ಅಲಿ! ಇದರ ಬಗ್ಗೆ ನೀವು ಏನಾದರು ತಿಳೀದುಕೊಳ್ಳಿ. ಈ ಹೆಸರು ಹಳೆ ಹೆಸರಾಗಿದೆ. ಇದಕ್ಕೆ ನಾನು ಉತ್ತರಿಸುವುದಿಲ್ಲ. ಅವನು ಹೇಳಿದನು ಹೌದೆ ನಿಮ್ಮ ಹೆಸರು ಅಬ್ದೆ ಇಲಾಹಿ ಉತ್ತಮ ವಾಗಿರುವುದು. ನಾನು ಉತ್ತರಿಸಿದೆ ಒಳ್ಳೆದು. ತದನಂತರ ನಾನು ಅವನನ್ನು ಭೇಟಿಯಾದಾಗ ಆತನು ನನಗೆ ಅಬ್ದೆ ಇಲಾಹಿ ಎಂದು ಕರೆಯುತ್ತಿದ್ದನು. ಅದಕ್ಕೆ ನಾನು ಉತ್ತರಿಸುತ್ತಿದ್ದೆ ಮತ್ತು ಅವನೊಂದಿಗೆ ಸಮಾಲೋಚನೆ ನಡೆಸುತ್ತಿದ್ದೆ. ಬದರ್ ಯುದ್ಧದ ದಿನ ಬಂದಾಗ. ನಾನು ಒಮ್ಮೆ ಉಮಯ್ಯನ ಹತ್ತಿರದಿಂದ ಹೋಗುತ್ತಿದ್ದೆ ಆತನು ತನ್ನ ಪುತ್ರ ಅಲಿ ಬಿನ್ ಉಮಯ್ಯನ ಕೈ ಹಿಡಿದುಕೊಂಡು ನಿಂತಿದ್ದನು. ನನ್ನ ಬಳಿ ಅನೇಕ ಕವಚಗಳಿದ್ದವು. ಆತನು ನನ್ನನ್ನು ನೋಡಿ ಎಲ್ಲೈ ಅಬ್ದೆ ಉಮರ್ ಎಂದು ಕೂಗಿದನು. ಆದರೆ ನಾನು ಉತ್ತರಿಸಲಿಲ್ಲ ಆತನು ಪುನಃ ನನ್ನನ್ನು ಅಬ್ದೆ ಇಲಾಹಿ ಎಂದು ಕೂಗಿದಾಗ ನಾನು ಆತನ ಬಳಿ ಹೋದೆನು. ಆತನು ಹೇಳಿದನು ಏನು ನನಗಿಂತ ಹೆಚ್ಚು ಪ್ರೀಯವಾದ ವಸ್ತು ಈ ಕವಚಗಳಾಗಿದ್ದೇಯೆ? ಎಂದು ಕೇಳಿದಾಗ ನಾನು ಅವರಿಬ್ಬರನ್ನು ರಕ್ಷಿಸಬೇಕೆಂದು ಆ ಕವಚಗಳನ್ನು ಅಲ್ಲಿಯೇ ತ್ಯಜಿಸಿ ಅವರನ್ನು ನನ್ನೊಂದಿಗೆ ಕರೆದುಕೊಂಡು ಹೋದೆನು. ಆಗ ಆತನು ಹೇಳಿದನು ಈ ದಿನದ ಹಾಗೆ ನಾನು ಎಂದೂ ಕಾಣಲಿಲ್ಲ. ಏನೇ ಇರಲಿ ಅವರು ಹೇಳುತ್ತಾರೆ: ನಾನು ಅವರಿಬ್ಬರ ಕೈಗೆಗಳನ್ನು ಹಿಡಿದುಕೊಂಡಿದ್ದೆನು. ಆಗ ಉಮಯ್ಯ ಕೇಳಿದನು ಎಲ್ಲೈ ಅಬ್ದೆ ಇಲಾಹಿ! ನಿಮ್ಮಲ್ಲಿ ಉಷ್ಟ್ರ ಪಕ್ಷಿಯ ರೆಕ್ಕೆಯನ್ನು ಸಾಂಕೇತಿಕವಾಗಿ ಇರಿಸಿಕೊಂಡಿದ್ದ ಆ ವ್ಯಕ್ತಿ ಯಾರಾಗಿದ್ದಾರೆ. ನಾನು ಉತ್ತರಿಸಿದೆ ಹಮ್‌ಝ ಬಿನ್ ಅಬ್ದುಲ್ ಮುತಲ್ಲಿಬ್ ಆಗಿದ್ದಾರೆ. ಆತನು ಹೇಳಿದನು ನಮ್ಮ ಈ ಪರಿಸ್ಥಿತಿಗೆ ಕಾರಣ ಈ ವ್ಯಕ್ತಿಯೇ ಆಗಿದ್ದಾನೆ. ಅವರು ಹೇಳುತ್ತಾರೆ ನಾನು ಅವರನ್ನು ಕರೆದುಕೊಂಡು ಹೊರಟಾಗ ಬಿಲಾಲ್(ರ) ನಮ್ಮನ್ನು ನೋಡಿದರು. ಉಮಯ್ಯ ಹಝ್ರತ್ ಬಿಲಾಲ್(ರ) ರವರನ್ನು ಇಸ್ಲಾಮ್ ತ್ಯಜಿಸುವುದಕ್ಕಾಗಿ ಬಹಳ ಹಿಂಸಿಸುತ್ತಿದ್ದನು. ಆತನು ಬಿಲಾಲ್(ರ) ರವರನ್ನು ಕಡು ಬಿಸಿಲಿನಲ್ಲಿ ಬಂಡೆಗಲ್ಲಿನ ಮೇಲೆ ಇರಿಸುತ್ತಿದ್ದನು. ಅನಂತರ ಅವರ ಎದೆಯ ಮೇಲೆ ಬಂಡೆಗಲ್ಲಿರಿಸಿ ಹೀಗೆ ಹೇಳುತ್ತಿದ್ದನು: ನೀನು ಮುಹಮ್ಮದ್(ಸ)ರ ಧರ್ಮವನ್ನು ತ್ಯಜಿಸದಿದ್ದರೆ ನಿನಗೆ ಹೀಗೆ ಶಿಕ್ಷೆ ನೀಡಲಾಗುವುದು. ಆದರೆ ಇಷ್ಟು ಹಿಂಸೆಗಳನ್ನು ಅನುಭವಿಸುತ್ತಾ ಅವರು ಕೇವಲ ಅಹದ್, ಅಹದ್ ಎಂದು ಹೇಳುತ್ತಿದ್ದರು. ಅಂದರೆ ಅವನು ಒಬ್ಬನಾಗಿದ್ದಾನೆ, ಒಬ್ಬನಾಗಿದ್ದಾನೆ. ಆದ್ದರಿಂದ ಆತನನ್ನು (ಉಮಯ್ಯ) ಬಿಲಾಲ್ ನೋಡಿದಾಗ ಹೇಳಿದರು ಉಮಯ್ಯ ಬಿನ್ ಖಲಫ್ ಕುಫರ್‌ನ ಮುಖಂಡನಾಗಿದ್ದಾನೆ. ಇತನು ಉಳಿದುಕೊಂಡರು ನನಗೆ ಮೋಕ್ಷವಿಲ್ಲ ಎಂದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು ಎಲ್ಲೈ ಬಿಲಾಲ್! ಇವರಿಬ್ಬರು ನನ್ನ ಖೈದಿಗಳಾಗಿದ್ದಾರೆ. ಬಿಲಾಲ್ ಹೇಳಿದರು: ಇವರಿಬ್ಬರು ಉಳಿದುಕೊಂಡರು ನನಗೆ ಮೋಕ್ಷವಿಲ್ಲ ಎಂದು ಮತ್ತೆ ಹೇಳಿದರು. ತದನಂತರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹಝ್ರತ್ ಬಿಲಾಲ್(ರ) ಅವರಿಗೆ ಹೇಳಿದರು ಎಲ್ಲೈ ಇಬ್ನೆ ಸೌದಾ!! ನೀವು ಕೇಳುತ್ತಿದ್ದೀರಾ. ಬಿಲಾಲ್ ಮತ್ತೊಮ್ಮೆ ಹೇಳಿದರು ಈತನು ಉಳಿದುಕೊಂಡರೆ ನನಗೆ ನೆಮ್ಮದಿ ಇರುವುದಿಲ್ಲ. ಮತ್ತೆ ಹಝ್ರತ್ ಬಿಲಾಲ್(ರ) ಮತ್ತೆ ಜೋರಾಗಿ ಹೇಳಿದರು: ಎಲ್ಲೈ ಅನ್ಸಾರ್!! ಇತನು ಕುಫರ್‌ನ ಮುಖಂಡ ಉಮಯ್ಯ ಬಿನ್ ಖಲಫ್ ಆಗಿದ್ದಾನೆ. ಈತನು ಉಳಿದುಕೊಂಡರೆ ನಾನು ನಶಿಸಿ ಹೋಗುವೆನು. ಅವರ ಈ ಶಬ್ಧಗಳನ್ನು ಆಲಿಸಿದ ನಂತರ ಜನರು ನಮ್ಮನ್ನು ಸುತ್ತುವರಿಸಿಕೊಂಡರು. ನಾನು ಅವನನ್ನು ರಕ್ಷಿಸುತ್ತಿದ್ದೆ. ಓರ್ವ ವ್ಯಕ್ತಿ ಆತನ ಪುತ್ರನನ್ನು ಖಡ್ಗದಿಂದ ಹೊಡೆದಾಗ ಆತನು ಕೆಳಗೆ ಬಿದ್ದನು. ಆ ಸಂದರ್ಭದಲ್ಲಿ ಆತನ ತಂದೆ ಉಮಯ್ಯ ಕಿರುಚಿದನು. ಅದಕ್ಕೆ ನಾನು ಹೇಳಿದೆ ಓಡಿಹೋಗಿ ಎಂದು. ಆದರೆ ಓಡಿ ಹೋಗಲು ಸಾಧ್ಯವಾಗಲಿಲ್ಲ. ಅಲ್ಲಾಹನಾಣೆ!1 ನಾನು ನಿಮ್ಮ ಯಾವುದೇ ಕೆಲಸಕ್ಕೆ ಬರುವುದಿಲ್ಲ. ಇಷ್ಟರಲ್ಲೇ ಹಲ್ಲೆ ಮಾಡುವವರು ಅವರ ಇಬ್ಬರ ಮೇಲೆ ಖಡ್ಗಗಳನ್ನು ಪ್ರಯೋಗಿಸಿದರು. ಕೊನೆಗೆ ಅವರಿಬ್ಬರನ್ನು ಇಲ್ಲವಾಗಿಸಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳುತ್ತಾರೆ ಅಲ್ಲಾಹನು ಬಿಲಾಲ್(ರ) ಅವರಿಗೆ ಕರುಣಿಸಲಿ. ನಾನು ನನ್ನ ಕವಚಗಳು ಕಳೆದುಕೊಂಡೆನು ಮತ್ತು ಖೈದಿಗಳನ್ನು ಅವರು ಒತ್ತಾಯಪೂರ್ವಕವಾಗಿ ನನ್ನಿಂದ ತೆಗೆದುಕೊಂಡರು. (ತಾರೀಖುತ್ತಿಬ್ರಿ, ಸಂಪುಟ–2, ಪುಟ–35, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಉಹುದ್ ಯುದ್ಧದಲ್ಲಿಯೂ ಭಾಗವಹಿಸಿದ್ದರು. ಉಹುದ್ ದಿನದಂದು ಜನರ ಹೆಜ್ಜೆಗಳು ಅಸ್ಥಿರವಾದಾಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸ್ಥಿರವಾಗಿ ನಿಂತರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–95, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಉಹುದ್ ಯುದ್ಧದಲ್ಲಿ ಅವರಿಗೆ 21 ಗಾಯಗಳಾದುವು. ಅವರ ಪಾದದಲ್ಲಿ ಉಂಟಾದ ಗಾಯದಿಂದಾಗಿ ಅವರು ಕುಂಟುತ್ತಾ ನಡೆಯುತ್ತಿದ್ದರು. ಅವರ ಬಾಯಿಯ ಮುಂಬಾಗದಲ್ಲಿರುವ ಎರಡು ಹಲ್ಲುಗಳು ಸಹ ಕಿತ್ತುಹೋಗಿದ್ದುವು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–3, ಪುಟ–476, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಇಬ್ನು ಉಮರ್ ಹೇಳುತ್ತಾರೆ: ಹಿಜರಿ ವರ್ಷ 6 ಶಅಬಾನ್ ತಿಂಗಳಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರ ನೇತೃತ್ವದಲ್ಲಿ ಏಳುನೂರು ಜನರನ್ನು ದೂಮತುಲ್ ಜುಂದಲ್‌ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಳುಹಿಸುವಾಗ ತಮ್ಮ ಸ್ವಂತ ಕೈಯಿಂದ ಕಪ್ಪು ಬಣ್ಣದ ಮುಂಡಾಸನ್ನು ಅವರ ತಲೆಗೆ ಕಟ್ಟಿದರು ಮತ್ತು ಅದರ ತೂಗಾಡುವ ಭಾಗವನ್ನು ಭುಜಗಳ ಮಧ್ಯೆ ಇರಿಸಿದರು. ಮತ್ತೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಅಬೂ ಮುಹಮ್ಮದ್! ನನಗೆ ದೊಮತುಲ್ ಜಂದಲ್ ಕಡೆಯಿಂದ ಆತಂಕದ ಸಮಾಚಾರಗಳನ್ನು ತಲುಪುತ್ತಿದೆ. ಅಲ್ಲಿ ಮದೀನದ ಮೇಲೆ ಆಕ್ರಮಣ ಮಾಡಲು ಸೈನ್ಯ ಸಿದ್ಧಗೊಳ್ಳುತ್ತಿದೆ. ನೀವು ಅಲ್ಲಾಹನ ಮಾರ್ಗದಲ್ಲಿ ಜಿಹಾದ್‌ಗಾಗಿ ಹೊರಡಿರಿ. ಏಳು ನೂರು ಮುಜಾಹಿದರು ನಿಮ್ಮೊಂದಿಗೆ ಹೋಗುವರು. ದೂಮತುಲ್ ಜಂದಲ್ ತಲುಪಿ ಅಲ್ಲಿನ ಸರದಾರನನ್ನು ಮತ್ತು ಅವರ ಗೋತ್ರ ಕಲ್ಬ್‌ನನ್ನು ಮೊದಲು ಇಸ್ಲಾಮ್ ಧರ್ಮದ ಕಡೆ ಅಹ್ವಾನಿಸಿ ಆದರೆ ಯುದ್ಧ ಮಾಡಬೇಕೆಂದು ಬಯಸಿದರೆ ಯಾರಿಗೂ ಮೋಸ, ವಂಚನೆ ಮಾಡಬೇಡಿರಿ. ಮಕ್ಕಳನ್ನು ಮತ್ತು ಮಹಿಳೆಯರನ್ನು ಕೊಲ್ಲ ಬೇಡಿ ಮತ್ತು ಅಲ್ಲಾಹನ ದ್ರೋಹಿಗಳನ್ನು ಲೋಕದಿಂದ ಸ್ವಚ್ಛಗೊಳಿಸಬೇಕು. ಈ ಎಲ್ಲಾ ಮುನ್ನೆಚ್ಚರಿಕೆಗಳೊಂದಿಗೆ ಯುದ್ಧ ಮಾಡಲು ಅನುಮತಿ ನೀಡಲಾಗುವುದು. ಹೀಗಾಗಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ದೂಮ ಎಂಬ ಸ್ಥಳಕ್ಕೆ ತಲಪಿ ಅವರಿಗೆ ಮೂರು ದಿನಗಳ ಕಾಲ ಇಸ್ಲಾಮಿಗೆ ಆಹ್ವಾನ ನೀಡುತ್ತಾ ಇದ್ದರು. ಅಲ್ಲಿನ ಜನರು ನಿರಾಕರಿಸುತ್ತಾ ಇದ್ದರು. ಅನಂತರ ಅಲ್ಲಿನ ಜನರ ನಾಯಕನಾದ ಮತ್ತು ಕ್ರೈಸ್ತ ಧರ್ಮಾವಲಂಬಿಯಾಗಿದ್ದ ಅಸ್‌ಬಗ್ ಬಿನ್ ಅಮರ್ ಕಲ್‌ಬೀ ಇಸ್ಲಾಮ್ ಧರ್ಮ ಸ್ವೀಕರಿಸಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಎಲ್ಲಾ ಸ್ಥಿತಿಗತಿಗಳನ್ನು ಬರೆದು ತಿಳಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆ ಜನರ ನಾಯಕನ ಪುತ್ರಿಯಾದ ತಮಾಝುರ್‌ಳನ್ನು ವಿವಾಹವಾಗಿರಿ. ಹಾಗೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಆ ಮಹಿಳೆಯನ್ನು ವಿವಾಹವಾಗಿ ನಂತರ ಅವರನ್ನು ಕರೆದುಕೊಂಡು ಮದೀನಕ್ಕೆ ಆಗಮಿಸಿದರು. ಆ ಮಹಿಳೆ ಅನಂತರ ಉಮ್ಮು ಅಬೂ ಸಲ್ಮಾ ಎಂಬ ಹೆಸರಲ್ಲಿ ಕರೆಯಲ್ಪಟ್ಟರು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್ ಸಾಹೆಬ್ ಸಂಪುಟ–2, ಪುಟ–106, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–96, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, ಅಶ್ರಹ್ ಮುಬಶ್ಶಿರಹ್ ಸಾಜಿದ್ ಪುಟ–875, ಅಲ್‌ಬದರ್ ಪಬ್ಲಿಕೇಶನ್ಸ್ ಲಾಹೋರ್)

ಉಮರ್ ಬಿನ್ ಅಬ್ದುಲ್ ಅಝೀಝ್ ಹೇಳುತ್ತಾರೆ: 11 ಹಿಜರಿಯಲ್ಲಿ ಜಸರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಉಮರ್(ರ) ರವರಿಗೆ ಹಝ್ರತ್ ಅಬೂ ಉಬೈದ ಬಿನ್ ಮಸ್‌ಊದ್(ರ) ರವರ ಶಹಾದತ್ ಬಗ್ಗೆ ಸಮಾಚಾರ ತಿಳಿದು ಬಂದಾಗ. ಜಸರ್ ಯುದ್ಧದ ಬಗ್ಗೆ ಇದಕ್ಕು ಮೊದಲೇ ಪ್ರಸ್ತಾಪಿಸಲಾಗಿದೆ. ಫಾರಸಿಯವರ ಆನೆಯೊಂದು ಅವರನ್ನು ತುಳಿದು ಹಾಕಿದರ ಬಗ್ಗೆ ಸಮಾಚಾರ ತಿಳಿದಾಗ ಮತ್ತು ಫಾರಿಸಿಯವರು ಕಸ್ರದ ಓರ್ವ ವ್ಯಕ್ತಿಯನ್ನು ಹುಡುಕಿ ತಮ್ಮ ಸರದಾರರನ್ನಾಗಿಸಿದ್ದಾರೆ ಎಂದು ತಿಳಿದು ಬಂದಾಗ, ಹಝ್ರತ್ ಉಮರ್(ರ) ರವರು ಮುಹಾಜಿರೀನ್ ಹಾಗೂ ಅನ್ಸಾರ್‌ರವರನ್ನು ಜಿಹಾದ್ ಕಡೆ ಅಹ್ವಾನಿಸಿದರು. ಹಾಗೂ ಮದೀನದಿಂದ ಹೊರಟು ಸಿರಾರ್ ಎಂಬ ಸ್ಥಳಕ್ಕೆ ತಲುಪಿದರು. ಸಿರಾರ್ ಮದೀನದ ಒಂದು ಬೆಟ್ಟದ ಹೆಸರಾಗಿದೆ. ಇದು ಮದೀನದಿಂದ ಮೂರು ಮೈಲಿ ದೂರದಲ್ಲಿ ಇರಾಕ್‌ನ ಮಾರ್ಗದಲ್ಲಿದೆ. ಅಲ್ಲಿ ಅವರು ತಂಗಿ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್‌ರವರನ್ನು ಅಅ್‌ವಸ್ ಎಂಬ ಸ್ಥಳಕ್ಕೆ ತಲುಪಲು ಕಳುಹಿಸಿದರು. ಹಾಗೂ ಮೈಮನ ಎಂದರೆ ಸೈನ್ಯದ ಎಡಭಾಗದಲ್ಲಿ ಇರುವವನಾಗಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)

ಮತ್ತು ಮೈಸರ ಅಂದರೆ ಸೈನ್ಯದ ಬಲಭಾಗದಲ್ಲಿರುವವನನ್ನಾಗಿ ಝುಬೈರ್ ಬಿನ್ ಅವಾಮ್(ರ) ಅವರನ್ನು ನೇಮಿಸಿದರು. ಹಝ್ರತ್ ಅಲಿ(ರ) ಅವರನ್ನು ಮದೀನದಲ್ಲಿ ತಮ್ಮ ರಾಯಬಾರಿಯನ್ನಾಗಿ ನೇಮಿಸಿದರು.

ಹಝ್ರತ್ ಉಮರ್(ರ) ರವರು ಜನರಿಂದ ಸಮಾಲೋಚನೆ ನಡೆಸಿದರು ಆಗ ಎಲ್ಲರೂ ಅವರನ್ನು ಫಾರಿಸ್‌ಗೆ ಹೋಗಲು ಸಲಹೆ ನೀಡಿದರು. ಈ ಸೈನ್ಯವೂ ಹೊರಟು ಸಿರಾರ್‌ಗೆ ಬಂದು ಸೇರುವ ತನಕ ಹಝ್ರತ್ ಉಮರ್(ರ) ಯಾರಿಂದಲೂ ಸಮಾಲೋಚನೆ ನಡೆಸಿರಲಿಲ್ಲ. ಸಿರಾರ್‌ಗೆ ತಲುಪಿದ ನಂತರ ಅವರು ಸಲಹೆ ಕೇಳಿದರು. ಹಝ್ರತ್ ತಲ್ಹ(ರ) ಹಿಂದಿರುಗಿ ಬಂದಾಗ ಅವರು ಸಹ ಆ ಜನರ ಯೋಚನೆಯನ್ನೆ ಹೊಂದಿದ್ದರು (ಅಂದರೆ ಅವರು ಸಹ ಪಾರಿಸ್‌ಗೆ ಹೋಗಬೇಕೆಂದು ಯೋಚಿಸಿದ್ದರು) ಹಝ್ರತ್ ತಲ್ಹ(ರ) ಮೊದಲು ಅಲ್ಲಿರಲಿಲ್ಲ. ಅವರು ಹೇಳಿದರು ಸರಿ ಪಾರಿಸ್‌ಗೆ ಹೊರಡಬೇಕು ಎಂದು ಹೇಳಿದರು. ಆದರೆ ಹಝ್ರತ್ ಅಬ್ದುರ್ರಹ್ಮಾನ್(ರ) ರವರು ಹಝ್ರತ್ ಉಮರ್(ರ) ರವರನ್ನು ಹೋಗಲು ತಡೆಯುವವರಲ್ಲಿದ್ದರು. ಅದಕ್ಕೆ ಕಾರಣ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳುತ್ತಾರೆ: ಇಲ್ಲಿಯ ತನಕ ನಾನು ಎಂದೂ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಹೊರತುಪಡಿಸಿ ಯಾರಿಗೂಗೂ ನನ್ನ ತಂದೆ ತಾಯಿಯವರನ್ನು ತ್ಯಾಗ ಮಾಡಿರಲಿಲ್ಲ ಇನ್ನು ಮುಂದೆ ಯಾರ ಮೇಲೆಯು ಮಾಡುವುದಿಲ್ಲ ಆದರೆ ಈಗ ನಾನು ಹೇಳುತ್ತೇನೆ ನಿಮ್ಮ ಮೇಲೆ ನನ್ನ ತಂದೆ ತಾಯಿ ತ್ಯಾಗವಾಗಲಿ ನೀವು ಈ ಸಮಸ್ಯೆಯ ಕೊನೆಯ ನಿರ್ಣಯವನ್ನು ತೆಗೆದುಕೊಳ್ಳಲು ನನಗೆ ಅನುಮತಿ ನೀಡಿರಿ. ಹಝ್ರತ್ ಉಮರ್ ಆಗ ಖಲೀಫರಾಗಿದ್ದರು. ಅವರು ಉತ್ತರಿಸಿದರು. ನೀವು ಸಿರಾರ್‌ಗೆ ತಲುಪಿರಿ ಮತ್ತು ಒಂದು ದೊಡ್ಡ ಸೈನ್ಯವನ್ನು ಕಳುಹಿಸಿರಿ. ಆರಂಭದಿಂದಲೂ ನೀವು ನೋಡಿದ್ದೀರ ನಿಮ್ಮ ಸೈನ್ಯದ ಬಗ್ಗೆ ಅಲ್ಲಾಹನ ತೀರ್ಪು ಏನಾಗಿತ್ತು ಎಂದು. ಒಂದು ವೇಳೆ ನಿಮ್ಮ ಸೈನ್ಯವೂ ಸೋತು ಹೋದರೆ ಅದು ನಿಮ್ಮ ಸೋಲು ಎಂದು ಪರಿಗಣಿಸಲಾಗುವುದಿಲ್ಲ. ಅವರು ಹೇಳಿದರು ನೀವು ಆರಂಭದಲ್ಲಿಯೇ ಮೃತರಾಗುತ್ತಿದ್ದರೆ ಮುಸ್ಲಿಮರು ಎಂದಿಗೂ ತಕ್ಬೀರ್ ಪಠಿಸಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಲಾ ಇಲಾಹ ಇಲ್ಲಲ್ಲಾಹ್ ಎಂದು ಸಾಕ್ಷಿ ಸಹ ನೀಡಲು ಸಾಧ್ಯವಾಗುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಹಝ್ರತ್ ಉಮರ್(ರ) ರವರ ಬಳಿ ಹಝ್ರತ್ ಸಅದ್‌ರವರ ಪತ್ರ ತಲುಪಿತು, ಹಝ್ರತ್ ಸಅದ್(ರ) ಆಗ ನಜದ್‌ನ ಸದಖಗಳ ಮೇಲೆ ಮೇಲಧಿಕಾರಿಯಾಗಿದ್ದರು. ಹಝ್ರತ್ ಉಮರ್(ರ) ರವರು ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ಮಾತುಗಳನ್ನು ಆಲಿಸಿ ಹೇಳಿದರು: ಸರಿ ಮತ್ತೆ ನನಗೆ ಬೇರೆ ವ್ಯಕ್ತಿಯ ಹೆಸರನ್ನು ಹೇಳಿರಿ? ಯಾರಿಗೆ ಈ ಕೆಲಸವನ್ನು ನೀಡಬೇಕು? ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು ವ್ಯಕ್ತಿ ನಿಮಗೆ ದೊರಕಿದೆ. ಹಝ್ರತ್ ಉಮರ್(ರ) ಯಾರು ಎಂದು ಕೇಳಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು: ಹೆಬ್ಬುಲಿಯಾದ ಸಅದ್ ಬಿನ್ ಮಾಲಿಕ್(ರ) ಬಹಳ ಧೈರ್ಯವಂತ ವ್ಯಕ್ತಿ. ಉತ್ತಮವಾದ ಸೈನ್ಯಾಧಿಕಾರಿ ಆಗಿದ್ದಾರೆ. ಅವರನ್ನು ಸೈನ್ಯಾಧಿಕಾರಿಯನ್ನಾಗಿ ನೇಮಿಸಿ ಕಳುಹಿಸಿರಿ. ಉಳಿದ ಜನರು ಸಹ ಈ ಅಭಿಪ್ರಾಯಕ್ಕೆ ಸಮ್ಮತಿ ನೀಡಿದರು. ಇದು ತಾರೀಖುತ್ತಿಬರಿಯ ಉಲ್ಲೇಖವಾಗಿದೆ. (ತಾರೀಖುತ್ತಿಬರಿ, ಭಾಗ–3, ಪುಟ–381–382, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987, ಅಲ್‌ಕಾಮಿಲ್ ಫಿತ್ತಾರೀಖ್ ಸಂಪುಟ–2, ಪುಟ–287, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003, ಫರ್‌ಹಂಗ್ ಸೀರತ್, ಫಝ್ಲುರ್ರಹ್ಮಾನ್ ಸಾಹೆಬ್ ಪುಟ–172, ಝುವಾರಿ ಅಕಾಡೆಮಿ ಕರಾಚಿ 2003)

ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಮದೀನದಲ್ಲಿ ಅನೇಕ ಗೋತ್ರದವರು ಮತ್ತು ಸಹಾಬರ ವಸತಿಗಾಗಿ ಸ್ಥಳವನ್ನು ನೀಡಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ಗೋತ್ರದವರಿಗೆ ಮಸ್ಜಿದ್ ನಬವಿಯ ಸಮೀಪ ಖರ್ಜೂರದ ತೋಪಿನಲ್ಲಿ ಜಾಗವನ್ನು ನೀಡಿದರು. ಮತ್ತೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹಾಗೂ ಹಝ್ರತ್ ಉಮರ್(ರ) ರವರಿಗೂ ಒಂದು ಭೂಮಿಯನ್ನು ಸಂಪತ್ತನ್ನಾಗಿ ನೀಡಿದರು. ಉಮರ್ ಕುಟುಂಬದವರಿಂದ ಈ ಸಂಪತ್ತನ್ನು ಹಝ್ರತ್ ಝುಬೈರ್(ರ) ರವರು ಖರೀದಿಸಿಕೊಂಡರು. ಹಝ್ರತ್ ಉಮರ್(ರ) ರವರ ಮಕ್ಕಳಿಂದ ಈ ಸಂಪತ್ತನ್ನು ಹಝ್ರತ್ ಝುಬೈರ್(ರ) ರವರು ಖರೀದಿಸಿದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರಿಗೆ ವಾಗ್ದಾನ ಮಾಡಿದ್ದರು. ಮುಸ್ಲಿಮರು ಸೀರಿಯವನ್ನು ಜಯಗೊಳಿಸಿದರೆ ಆ ಭಾಮಿಯ ಭಾಗ ನಿಮ್ಮದಾಗುವುದು ಎಂದು. ಹೀಗಾಗಿ ಹಝ್ರತ್ ಉಮರ್(ರ) ರವರ ಖಿಲಾಫತ್ ಕಾಲದಲ್ಲಿ ಸೀರಿಯಾದಲ್ಲಿ ಮುಸ್ಲಿಮರು ವಿಜಯಶಾಲಿಯಾದಾಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರಿಗೆ ಆ ಭೂಮಿ ಭಾಗಗಳನ್ನು ನೀಡಿದರು. ಅವರಿಗೆ ನೀಡಿದ ಬೂಮಿಯು ಸಲೀಲ್ ಎಂಬ ಪ್ರದೇಶದಲ್ಲಿತ್ತು. (ರೌಶನ್ ಸಿತಾರೆ ಗುಲಾಮ್ ಬಾರಿ ಸೈಫ್ ಸಾಹೆಬ್ ಸಂಪುಟ–2, ಪುಟ–105–106)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ಹಿಂದೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಮಾಝ್ ನಿರ್ವಹಿಸಿದ ಸೌಭಾಗ್ಯಗಳಿಸಿದರು. ಹಝ್ರತ್ ಮುಗ್ಯೆರ(ರ) ವರದಿ ಮಾಡುತ್ತಾರೆ: ಅವರು ಒಮ್ಮೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ತಬೂಕ್ ಯುದ್ಧದಲ್ಲಿ ಜೊತೆಗಿದ್ದರು. ಹಝ್ರತ್ ಮುಗ್ಯೆರ(ರ) ಹೇಳುತ್ತಾರೆ: ರಸೂಲುಲ್ಲಾಹ್(ಸ) ತಮ್ಮ ಅನಿವಾರ್ಯ ಕಾರ್ಯಕ್ಕಾಗಿ ಫಜರ್ ನಮಾಝ್‌ಗೆ ಮುಂಚೆಯೇ ಹೋದರು. ನಾನು ರಸೂಲುಲ್ಲಾಹ್(ರ) ರವರೊಂದಿಗೆ ನೀರಿನ ಬಟ್ಟಲು ತೆಗೆದುಕೊಂಡು ಹೋದೆನು. ರಸೂಲುಲ್ಲಾಹ್(ಸ) ರವರು ಸ್ವಲ್ಪ ಸಮಯದ ನಂತರ ನನ್ನ ಕಡೆ ಬಂದರು ನಾನು ಸ್ವಲ್ಪ ದೂರದಲ್ಲಿ ನಿಂತಿದ್ದೆನು. ನಾನು ನೀರಿನ ಬಟ್ಟಲಿನಿಂದ ರಸೂಲುಲ್ಲಾಹ್(ಸ)ರವರ ಕೈಗಳ ಮೇಲೆ ನೀರನ್ನು ಹಾಕಿದಾಗ ಅವರು(ಸ) ತಮ್ಮ ಎರಡು ಕೈಗಳನ್ನು ಮೂರು ಬಾರಿ ತೊಳೆದರು ಅನಂತರ ಅವರು ತಮ್ಮ ಮುಖವನ್ನು ಸ್ವಚ್ಛಗೊಳಿಸಿದರು. ಅನಂತರ ಅವರು ತಮ್ಮ ಕೈಗಳನ್ನು ಕೈಗಳ ಕೊನೆಯವರೆಗೂ ತೊಳೆದರು. ಮತ್ತೆ ರಸೂಲುಲ್ಲಾಹ್(ಸ) ರವರು ತಮ್ಮ ಮೌಝೆಗಳ ಮೇಲಿನಿಂದ ಮಸಹ್ ಮಾಡಿಸಿ ಸ್ವಚ್ಛಗೊಳಿಸಿದರು. ಮುಗ್ಯೆರ ಹೇಳುತ್ತಾರೆ: ನಾನು ಸಹ ರಸೂಲುಲ್ಲಾಹ್(ಸ) ಅವರೊಂದಿಗೆ ಹೊರಟೆನು. ಅಲ್ಲಿ ಜನರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರನ್ನು ನಮಾಝ್ ನಿರ್ವಹಿಸಲು ಮುಂದೆ ಮಾಡಿದ್ದರು ಅವರು ನಮಾಝ್ ನಿರ್ವಹಿಸುತ್ತಿದ್ದರು. ಆಗ ರಸೂಲುಲ್ಲಾಹ್(ಸ)ರವರಿಗೆ ಕೇವಲ ಒಂದು ರಕತ್ ಪಡೆದರು. ಅಂದರೆ ಅವರು ಬರುವ ತನಕ ಫಜರ್ ನಮಾಜಿನ ಒಂದು ರಕತ್ ಮುಗಿದು ಹೋಗಿತ್ತು. ಎರಡನೆಯ ರಕತ್‌ನಲ್ಲಿ ನಮಾಝಿನ ಪಂಕ್ತಿಯಲ್ಲಿ ಸೇರಿದರು. ರಸೂಲುಲ್ಲಾಹ್(ಸ) ರವರು ಜನರೊಂದಿಗೆ ಎರಡನೇಯ ರಕತ್ ನಿರ್ವಹಿಸಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರು ಸಲಾಮ್ ಹೇಳಿದಾಗ ರಸೂಲುಲ್ಲಾಹ್(ಸ) ರವರು ಎದ್ದು ನಿಂತು ಉಳಿದ ನಮಾಝನ್ನು ನಿರ್ವಹಿಸಲು ಎದ್ದು ನಿಂತಾಗ ಈ ವಿಷಯವೂ ಮುಸ್ಲಿಮರಲ್ಲಿ ತಳಮಳ ಉಂಟು ಮಾಡಿತು. ಅವರೆಲ್ಲರು ಇನ್ನು ಹೆಚ್ಚಾಗಿ ತಸ್ಬೀಹ್ ಮಾಡಲು ಪ್ರಾರಂಭಿಸಿದರು. ರಸೂಲುಲ್ಲಹ್(ಸ) ರವರು ತಮ್ಮ ನಮಾಝನ್ನು ಪೂರ್ಣಗೊಳಿಸಿದ ನಂತರ ಜನರನ್ನು ಉದ್ದೇಶಿಸಿ ಹೇಳಿದರು ನೀವು ಇದನ್ನು ಸರಿಯಾಗಿ ಮಾಡಿದ್ದೀರಿ. ರಸೂಲುಲ್ಲಾಹ್(ಸ) ರವರು ಸರಿಯಾದ ಹೊತ್ತಿನಲ್ಲಿ ನಮಾಝ್ ನಿರ್ವಹಿಸಿದ ಬಗ್ಗೆ ಸಮಾಧಾನ ವ್ಯಕ್ತ ಪಡಿಸಿದರು. ಹಝ್ರತ್ ಮುಗ್ಯೆರ ಹೇಳುತ್ತಾರೆ: ನಾವು ಅಲ್ಲಿ ತಲುಪಿದಾಗ ಹಝ್ರತ್ ಅಬ್ದುರ್ರಹ್ಮಾನ್(ರ) ರವರನ್ನು ಹಿಂದಕ್ಕೆ ಸರಿಸ ಬೇಕೆಂದು ಬಯಸಿದೆ ಆದರೆ ರಸೂಲುಲ್ಲಾಹ್(ಸ) ಸುಮ್ಮನಿರಿ ಎಂದು ಹೇಳಿದರು. ಅವರು ನಮಾಝ್ ನಿರ್ವಹಿಸಲಿ. ತದನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರ ಹಿಂದೆ ನಿಂತು ನಮಾಝ್ ನಿರ್ವಹಿಸಿದರು. ನಮಾಝ್ ನಿರ್ವಹಿಸಿದ ನಂತರ ಹುಝೂರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿಶ್ಚಯವಾಗಿಯೂ ಪ್ರತಿಯೊಬ್ಬ ನಬಿ ತನ್ನ ಜೀವಿತ ಕಾಲದಲ್ಲಿ ತನ್ನ ಸಮುದಾಯದ ಒಬ್ಬ ಸಾತ್ವಿಕನಾದ ಮನುಷ್ಯನ ಹಿಂದೆ ನಿಂತು ನಮಾಝ್ ನಿರ್ವಹಿಸುವರು. (ಸಹೀಹ್ ಮುಸ್ಲಿಮ್ ಕಿತಾಬುಸ್ಸಲಾತ್ ಹದೀಸ್–274, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–95, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಇದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರಿಗೆ ನೀಡಿದ ಗೌರವವಾಗಿತ್ತು. ಕೇವಲ ಸರಿ ಇದೆ ಎಂದು ಹೇಳಲಿಲ್ಲ ಬದಲಿಗೆ ಪ್ರತಿಯೊಬ್ಬ ನಬಿ ತನ್ನ ಜೀವಿತ ಕಾಲದಲ್ಲಿ ತನ್ನ ಸಮುದಾಯದ ಒಬ್ಬ ಸಾತ್ವಿಕನಾದ ಮನುಷ್ಯನ ಹಿಂದೆ ನಿಂತು ನಮಾಝ್ ನಿರ್ವಹಿಸುವರು ಎಂದು ಸಹ ಹೇಳಿದರು.

ಒಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಝುಹರ್ ನಮಾಝ್‌ಗೆ ಮೊದಲು ದೀರ್ಘವಾಗಿ ನಫ್ಲ್ ನಮಾಝ್ ನಿರ್ವಹಿಸುತ್ತಿದ್ದರು. ಆಝಾನ್ ಶಬ್ದ ಆಲಿಸಿದ ಕೂಡಲೆ ನಮಾಝ್‌ಗೋಸ್ಕರ ಮಸ್‌ಜಿದ್‌ಗೆ ಹೋಗುತ್ತಿದ್ದರು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್ ಸಾಹೆಬ್, ಸಂಪುಟ–2, ಪುಟ–107)

ಒಬ್ಬ ವರದಿಗಾರ ಹೀಗೆ ಹೇಳುತ್ತಾರೆ: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಕಅಬದ ಪ್ರದಕ್ಷಿಣೆ ಮಾಡುವಾಗ ಹೀಗೆ ಪ್ರಾರ್ಥಿಸುತ್ತಿದ್ದರು: ಓ ಅಲ್ಲಾಹ್ ನನ್ನನ್ನು ನನ್ನ ಆತ್ಮದ ಜಿಪುಣತನದಿಂದ ರಕ್ಷಿಸು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್ ಸಾಹೆಬ್, ಸಂಪುಟ–2, ಪುಟ–110)

ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ವರದಿ ಮಾಡುತ್ತಾರೆ, ಹಝ್ರತ್ ಉಮರ್(ರ) ಖಲೀಫರಾಗಿ ಚುನಾಯಿಸಲ್ಪಟ್ಟಾಗ ಅದೇ ವರ್ಷ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರನ್ನು ಹಜ್‌ಗೆ ಅಮೀರರನ್ನಾಗಿ ನೇಮಿಸಿದರು. (ತಾರೀಖುತ್ತಿಬರಿ ಸಂಪುಟ–3, ಪುಟ–379–380, ದಾರುಲ್ ಕುತುಬ್ ಇಲ್ಮಿಯಾ ಬೈರೂತ್ 1987)

ಅಬೂ ಸಲ್ಮಾ ವರದಿ ಮಾಡುತ್ತಾರೆ ಒಮ್ಮೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇನುಗಳ ತೊಂದರೆಯ ಬಗ್ಗೆ ದೂರಿದಾಗ ಅವರಿಗೆ ರೇಷ್ಮೆ ಬಟ್ಟೆಯ ಪೋಷಾಕು ಧರಿಸಲು ಅನುಮತಿ ನೀಡಲಾಯಿತು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಹಾಗೂ ಹಝ್ರತ್ ಅಬೂಬಕ್ಕರ್(ರ) ರವರು ನಿಧನ ಹೊಂದಿದ ನಂತರ ಹಝ್ರತ್ ಉಮರ್(ರ)ರವರ ಖಿಲಾಫತ್ ಕಾಲದಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರವರು ತಮ್ಮ ಪುತ್ರ ಅಬೂಸಲ್ಮರವರೊಂದಿಗೆ ಹಝ್ರತ್ ಉಮರ್(ರ) ರವರ ಬಳಿ ತೆರಳಿದಾಗ ಅಬೂಸಲ್ಮ ರೇಶ್ಮೆ ಬಟ್ಟೆ ಧರಿಸಿದ್ದರು ಆಗ ಹಝ್ರತ್ ಉಮರ್(ರ) ಆ ಬಟ್ಟೆಯನ್ನು ಹರಿದು ಹಾಕಿದಾಗ ಹಝ್ರತ್ ಅಬ್ದುರ್ರಹಮಾನ್ ಬಿನ್ ಔಫ್ ಹೇಳಿದರು ನನಗೆ ರಸೂಲುಲ್ಲಾಹ್(ಸ) ರವರು ಅನುಮತಿ ನೀಡಿದ ಬಗ್ಗೆ ನಿಮಗೆ ಅರಿವಿಲ್ಲವೆ? ಆಗ ಹಝ್ರತ್ ಉಮರ್(ರ) ಹೇಳಿದರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಿಮಗೆ ಹೇನುಗಳ ತೊಂದರೆ ಇದ್ದಿದ್ದರಿಂದ ಅನುಮತಿ ನೀಡಿದ್ದರು ಆ ಅನುಮತಿ ನಿಮ್ಮ ಹೊರತು ಇನ್ನಾರಿಗು ನೀಡಿರಲಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ-3, ಪುಟ-96, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಸಅದ್ ಬಿನ್ ಇಬ್ರಾಹೀಮ್ ವರದಿ ಮಾಡುತ್ತಾರೆ: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹೊದ್ದುಕೊಳ್ಳುತ್ತಿದ್ದ ಚಾದರದ ಬೆಲೆ ನಾಲ್ಕು ಅಥವಾ ಐದು ನೂರು ದಿರ್‌ಹಮ್‌ಗಳಾಗಿದ್ದುವು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ-3, ಪುಟ-97, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಎಂದರೆ ಅವರು ಹಿಜ್‌ರತ್ ಮಾಡಿದಾಗ ಅವರ ಬಳಿ ಏನೂ ಇರಲಿಲ್ಲ. ಅನಂತರ ಅವರು ಬೆಲೆಬಾಳುವ ಪೋಷಾಕು ಧರಿಸುವವರಾದರು ಮತ್ತು ಅಸಂಖ್ಯಾತ ಸಂಪತ್ತುಗಳನ್ನು ಅಲ್ಲಾಹನು ಅವರಿಗೆ ದಯಪಾಲಿಸಿದನು.

ಹಝ್ರತ್ ಅಬೂಬಕರ್(ರ) ಮರಣಾಸನ್ನರಾಗಿದ್ದಾಗ ಹಝ್ರತ್ ಉಮರ್(ರ) ರನ್ನು ತನ್ನ ಅನಂತರ ಖಲೀಫರನ್ನಾಗಿ ನಿಶ್ಚಯಿಸಿದರು. ಅವರು ಅದರ ಬಗ್ಗೆ ಯೋಚಿಸಿದಾಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರನ್ನು ಕರೆದು ಅವರ ಸಲಹೆ ಕೇಳಿದ್ದರು. ಆಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು: ರಸೂಲುಲ್ಲಾಹ್(ಸ) ರವರ ಖಲೀಫರೆ!! ಅವರು ಎಲ್ಲರಿಗಿಂತ ಮಿಗಿಲಾಗಿದ್ದಾರೆ ಆದರೆ ಅವರ ಸ್ವಭಾವದಲ್ಲಿ ನಿಷ್ಠುರತೆ ಇದೆ. ಹಝ್ರತ್ ಅಬೂಬಕ್ಕರ್(ರ) ಹೇಳಿದರು ಈ ನಿಷ್ಠುರತೆಯ ಕಾರಣ ಅವರು ನನಗೆ ಮೃದುವಾಗಿ ಕಾಣುತ್ತಿದ್ದರು. ನಾನು ಮೃಧು ಸ್ವಭಾವದವನಾಗಿದ್ದರಿಂದ ಅವರು ಸ್ವಲ್ಪ ವೇಗವಾಗಿ ನಡೆಯುತ್ತಿದ್ದರು. ಹೀಗೆ ಮಾಡಿದರೆ ಸಮಾನತೆ ಇರಲಿ ಎಂದು. ಮತ್ತೆ ಹಝ್ರತ್ ಅಬೂಬಕ್ಕರ್ ಹೇಳಿದರು: ಈ ವಿಷಯವೂ ಅವರಿಗೆ ತಿಳಿದಾಗ ಇಂತಹ ಅನೇಕ ಮಾತುಗಳನ್ನು ಅವರು ತ್ಯಜಿಸುವರು. ಅನಂತರ ನೀವು ಅವರಲ್ಲಿ ನಿಷ್ಠುರತೆ ಕಾಣುವುದಿಲ್ಲ. ಮತ್ತೆ ಹೇಳಿದರು ಎಲೈ ಅಬೂ ಮುಹಮ್ಮದ್!! ನಾನು ಅವರ ಬಗ್ಗೆ ಚಿಂತಿಸಿ ನೋಡಿದ್ದೇನೆ ನಾನು ಯಾರ ಬಗ್ಗೆಯಾದರು ಕೋಪಗೊಂಡರೆ ಅಂದರೆ ಹಝ್ರತ್ ಅಬೂಬಕ್ಕರ್ ಹೇಳುತ್ತಾರೆ: ನಾನು ಯಾವಾಗಾದರು ಕೋಪಿಷ್ಠನಾದರೆ ಉಮರ್(ರ) ರವರು ನನ್ನನ್ನು ರಾಜಿಯಾಗಲು ಹೇಳುತ್ತಿದ್ದರು. ಆಗ ಹಝ್ರತ್ ಉಮರ್(ರ) ರವರ ಸಲಹೆಯು ಮೃಧುವಾಗಿರುತ್ತಿತ್ತು. ನಾನು ಯಾರಮೇಳಾದರು ಮೃದುವಾಗಿ ವರ್ತಿಸುತ್ತಿದ್ದರೆ ಅವರು ನನಗೆ ತೀವ್ರವಾಗಿ ವರ್ತಿಸಲು ಸಲಹೆ ನೀಡುತ್ತಿದ್ದರು. ತದನಂತರ ಹಝ್ರತ್ ಅಬೂಬಕ್ಕರ್(ರ) ಹೇಳಿದರು ಎಲೈ ಅಬೂ ಮುಹಮ್ಮದ್!! ಈ ಮಾತುಗಳನ್ನು ಯಾರ ಬಳಿಯು ಹೇಳಬೇಡಿರೀ ಎಂದಾಗ ಅವರು ಸರಿ ಎಂದು ಹೇಳಿದರು. (ತಾರೀಖುತ್ತಿಬರಿ ಸಂಪುಟ-3, ಪುಟ-352, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಮಕ್ಕಾ ನಗರವನ್ನು ಜಯಿಸಿದ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿವಿಧ ದಿಕ್ಕುಗಳಿಗೆ ಕೆಲವು ಪ್ರತಿನಿಧಿ ಸಂಘಗಳನ್ನು ಕಳುಹಿಸಿದರು. ಹಝ್ರತ್ ಖಾಲಿದ್ ಬಿನ್ ವಲೀದರನ್ನು ಬನೂ ಜಝೀಮ ಗೋತ್ರದವರ ಬಳಿಗೆ ಕಳುಹಿಸಲಾಗಿತ್ತು. ಬನೂ ಜಝೀಮ ಗೋತ್ರದವರು ಅಜ್ಞಾನ ಕಾಲದಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರ ಪಿತ ಔಫ್‌ರನ್ನು ಮತ್ತು ಹಝ್ರತ್ ಖಾಲಿದರ ಚಿಕ್ಕಪ್ಪ ಫಾಖಿಹ್ ಬಿನ್ ಮುಗ್ಯೆರರನ್ನು ಹತ್ಯೆ ಮಾಡಿದ್ದರು. ಹಝ್ರತ್ ಖಾಲಿದರಿಂದ ಆ ಗೋತ್ರದ ಒಬ್ಬನ ಹತ್ಯೆ ತಪ್ಪಾಗಿ ಸಂಭವಿಸಿತು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರಿಗೆ ಹಝ್ರತ್ ಖಾಲಿದರ ಈ ಕೃತ್ಯದ ಬಗ್ಗೆ ತಿಳಿದಾಗ ಅವರು ಹಝ್ರತ್ ಖಾಲಿದರೊಂದಿಗೆ ಕೇಳಿದರು: ನೀವು ಆ ಗೋತ್ರದ ಒಬ್ಬನನ್ನು ಕೊಂದದ್ದು ಆ ಗೋತ್ರದವರು ನಿಮ್ಮ ಚಿಕ್ಕಪ್ಪನನ್ನು ವಧಿಸಿದ ಕಾರಣದಿಂದಲೇ? ಆಗ ಹಝ್ರತ್ ಖಾಲಿದ್ ಒರಟಾಗಿ ಹೇಳಿದರು: ಅವರು ನಿಮ್ಮ ತಂದೆಯನ್ನು ಸಹ ಕೊಂದಿದ್ದರು. ಹಝ್ರತ್ ಖಾಲಿದ್ ಹೀಗೆ ಸಹ ಹೇಳಿದರು: ನೀವು ನಮಗಿಂತ ಮೊದಲು ವಿಶ್ವಾಸಿಗಳಾದ ಕಾರಣ ಬಹಳ ಹೆಮ್ಮೆ ಪಡುತ್ತಿರುವಿರಿ. ಈ ವಿಷಯ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿದಾಗ ಅವರು ಹೇಳಿದರು: ನನ್ನ ಸಹಾಬರನ್ನು ಬಿಟ್ಟು ಬಿಡಿರಿ. ನನ್ನ ಜೀವ ಯಾರ ಕೈಯಲ್ಲಿದೆಯೋ ಅವನ ಆಣೆಹಾಕಿ ಹೇಳುತ್ತೇನೆ, ನಿಮ್ಮ ಪೈಕಿ ಯಾರಾದರೂ ಉಹುದ್ ಬೆಟ್ಟದಷ್ಟು ಬಂಗಾರ ಈಗ ಖರ್ಚು ಮಾಡಿದರೂ ನನ್ನ ಆ ಸಹಾಬರು ಮಾಡಿದ ಸಾಮಾನ್ಯ ಖರ್ಚಿಗೂ ಸಮಾನವಾಗಲಾರದು. ಇದು ಅವರ ಉನ್ನತ ಪದವಿಯಾಗಿತ್ತು. (ರೌಶನ್ ಸಿತಾರೆ ಗುಲಾಮ್ ಬಾರಿ ಸ್ಯೆಫ್ ಸಾಹೆಬ್ ಸಂಪುಟ-2, ಪುಟ-108-109, ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ-3, ಪುಟ-479, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಪ್ರಾರಂಭದ ಕಾಲದ ಈ ಸಹಾಬರವರ ಬಲಿದಾನಗಳನ್ನು ಎದುರಿಸಲು ಯಾರಿಂದಲೂ ಸಾಧ್ಯವಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ದುರ್ರಹ್ಮಾನ್ ಬಗ್ಗೆ ಹೇಳಿದರು: ಅವರು ಮುಸ್ಲಿಮರ ಮುಖಂಡರ ಮುಖಂಡರಾಗಿರುವರು. ಅವರು ಹೀಗೆ ಸಹ ಹೇಳಿದರು: ಅಬ್ದುರ್ರಹ್ಮಾನ್ ಆಕಾಶದಲ್ಲಿಯೂ ಅಮೀನ್ ಆಗಿದ್ದಾರೆ ಭೂಮಿಯಲ್ಲಿಯೂ ಅಮೀನ್ ಆಗಿದ್ದಾರೆ. (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್ ಭಾಗ-2, ಪುಟ-846, ದಾರುಲ್ ಜೀಲ್ ಬೈರೂತ್)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಒಮ್ಮೆ ಕಠಿಣ ರೋಗಬಾಧಿತರಾಗಿ ಪ್ರಜ್ಞಾಶೂನ್ಯರಾದರು. ಅವರ ಪತ್ನಿ ಚೀರಾಟ ನಡೆಸಿದರು. ಅವರಿಗೆ ರೋಗ ಶಮನವಾದಾಗ ಹೇಳಿದರು: ನಾನು ಪ್ರಜ್ಞಾಶೂನ್ಯನಾಗಿದ್ದಾಗ ಇಬ್ಬರು ನನ್ನ ಬಳಿಗೆ ಬಂದು ಹೇಳಿದರು: ಅತ್ಯಂತ ವಿಶ್ವಸ್ತನಾದವನ (ದೇವನ) ಮುಂದೆ ನಿನ್ನನ್ನು ಕರೆದುಕೊಂಡು ಹೋಗುತ್ತೇವೆ ಮತ್ತು ನಿನ್ನ ಬಗ್ಗೆ ತೀರ್ಪು ನೀಡುವಂತೆ ಮಾಡುತ್ತೇವೆ. ಆ ಇಬ್ಬರಿಗೆ ಇನ್ನೊಬ್ಬ ಕಾಣಲು ಸಿಕ್ಕಿದ. ಆತ ಹೇಳಿದ ಅವನನ್ನು ಕರೆದುಕೊಂಡು ಹೋಗಬೇಡಿರಿ. ಏಕೆಂದರೆ ಅವನು ತಾಯಿಯ ಹೊಟ್ಟೆಯಲ್ಲಿರುವಾಗಲೇ ಅನುಗ್ರಹಿಸಲ್ಪಟ್ಟವನು. ಇದು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಸ್ವತಃ ತಮ್ಮ ಬಗ್ಗೆ ಹೇಳಿದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಭಾಗ-4, ಪುಟ-291, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ನೌಫಲ್ ಬಿನ್ ಇಯಾಸ್ ಹುಝಾಲಿ ಹೇಳುತ್ತಾರೆ: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ನಮ್ಮ ಸಭೆಯಲ್ಲಿ ಕುಳಿತಿದ್ದರು. ಅವರು ಉತ್ತಮ ಸಂಗಡಿಗರಾಗಿದ್ದರು. ಒಂದು ದಿವಸ ಅವರು ನಮ್ಮನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಸ್ನಾನ ಮಾಡಿ ಹೊರಬಂದು ನಮ್ಮ ಬಳಿ ಒಂದು ಪಾತ್ರೆ ತಂದರು ಅದರಲ್ಲಿ ರೊಟ್ಟಿ ಮತ್ತು ಮಾಂಸ ಇತ್ತು. ಮತ್ತೇನಾಯಿತು ಎಂದು ಗೊತ್ತಾಗಲಿಲ್ಲ ಅವರು ಅಳ ತೊಡಗಿದರು. ನಾವು ಕೇಳಿದೆವು ಅಬೂ ಮುಹಮ್ಮದ್!! ತಾವೂ ಏಕೆ ಅಳುತ್ತಿದ್ದೀರಿ. ಅವರು ಹೇಳಿದರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಎಂತಹ ಪರಿಸ್ಥಿತಿಯಲ್ಲಿ ನಿಧನ ಹೊಂದಿದರು ಎಂದರೆ ಅವರು ಅಥವಾ ಅವರ ಕುಟುಂಬದವರು ಹೊಟ್ಟೆ ತೊಂಬ ಜೋಳದ ರೊಟ್ಟಿಯು ಸೇವಿಸಿರಲಿಲ್ಲ. ಅಂದರೆ ಜೋಳದ ರೊಟ್ಟಿಯು ಸಹ ಸಂಪೂರ್ಣವಾಗಿ ಸಿಗುತ್ತಿರಲಿಲ್ಲ. ಮತ್ತೆ ಹೇಳಿದರು: ಯಾವ ವಸ್ತು ವಿಳಂಬವಾಯಿತು ಆ ವಸ್ತು ನಮಗೆ ದೊರಕಿರಬಹುದು ಎಂದು ನಾನು ಬಾವಿಸುವುದಿಲ್ಲ.

(ಅಲ್‌ಅಸಾಬ ಫೀ ತಮೀಝಿಸ್ಸಹಾಬ ಭಾಗ-4, ಪುಟ-291, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಅಂದರೆ ನಾವು ಇಷ್ಟು ವರ್ಷಗಳ ಕಾಲ ಜೀವಂತವಾಗಿರುವುದು ನಮಗೆ ಉತ್ತಮವೋ ಅಥವಾ ಯಾವುದಾದರೂ ಪರೀಕ್ಷೆ ಆಗಿರಬಹುದು. ಇದು ಸಹಾಬರವರ ಭಾವನೆಗಳಾಗಿದ್ದವು. ಒಂದು ಅಲ್ಲಾಹನ ಬಗ್ಗೆ ಭಯಭೀತಿ ಹೊಂದಿದ್ದರು ಇನ್ನೊಂದೆಡೆ ಪ್ರವಾದಿ ಮುಹಮ್ಮದ್(ಸ) ಹಾಗೂ ಅವರ ಕುಟುಂಬದವರೊಂದಿಗೆ ಇದ್ದ ಭಾವನೆಗಳಾಗಿದ್ದವು. ಇಂತಹ ಭಾವನೆಗಳು ಕೇವಲ ಪ್ರವಾದಿ ಮುಹಮ್ಮದ್(ಸ) ರವರೊಂದಿಗೆ ಅಥವಾ ಅವರ ಕುಟುಂಬದವರೊಂದಿಗೆ ಮಾತ್ರವಲ್ಲ ಬದಲಿಗೆ ಈ ಸಂಬಂಧವೂ ಪ್ರತಿಯೊಬ್ಬ ಸಹಾಬರವರು ಇನ್ನೊಬ್ಬ ಸಹಾಬರವರೊಂದಿಗೆ ಹೊಂದಿದ್ದರು. ಇದರ ಬಗ್ಗೆ ಒಂದು ಘಟನೆ ಹೀಗಿದೆ: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ಬಳಿ ಒಮ್ಮೆ ಇಫ್ತಾರಿಗೋಸ್ಕರ ಭೋಜನವನ್ನು ತರಲಾಯಿತು. ಅವರ ಮುಂದೆ ವಿವಿಧ ಭಕ್ಷಣವನ್ನಿರಿಸಿದಾಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರು ಒಂದು ತುತ್ತು ಸೇವಿಸಲು ಎತ್ತಿದಾಗ. ತಕ್ಷಣವೇ ಅವರಿಗೆ ಅನುಕಂಪ ಆವರಿಸಿತು. ಆಗ ಅವರು ಹೀಗೆ ಹೇಳಿ ಊಟ ತ್ಯಜಿಸಿದರು, ಮಸ್‌ಅಬ್ ಬಿನ್ ಉಮೈರ್(ರ) ಉಹದ್ ಯುದ್ಧದಲ್ಲಿ ಶಹೀದ್ ಆದರು ಅವರು ನನಗಿಂತ ಉತ್ತಮವಾಗಿದ್ದರು. ಅವರ ಹೊದಿಕೆಯಿಂದ ಅವರಿಗೆ ಕಫನ್ ನೀಡಲಾಯಿತು ಅಂದರೆ ಕಫನ್ ನೀಡಲು ಅವರ ಬಳಿ ಯಾವ ಬಟ್ಟೆಯು ಇರಲಿಲ್ಲ ಆದ ಕಾರಣ ಅವರು ಉಪಯೋಗಿಸುತ್ತಿದ್ದ ಹೊದಿಕೆಯನ್ನೆ ಅವರ ಕಫನ್‌ಗಾಗಿ ಉಪಯೋಗಿಸಲಾಗಿತ್ತು. ಆ ಕಫನ್ ಹೇಗಿತ್ತು? ಅವರ ಕಾಲನ್ನು ಮುಚ್ಚಿದಾಗ ಅವರ ತಲೆಯಿಂದ ಬಟ್ಟೆ

ಸರಿಯುತ್ತಿತ್ತು ತಲೆ ಮುಚ್ಚಿದಾಗ ಅವರ ಕಾಲಿನಿಂದ ಬಟ್ಟೆ ಸರಿಯುತ್ತಿತ್ತು. ಮತ್ತೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು ಹಂಝು(ರ) ಸಹ ಶಹೀದ್ ಆಗಿದ್ದಾರೆ. ಅವರು ಸಹ ನನಗಿಂತ ಉತ್ತಮವಾಗಿದ್ದರು ಆದರೆ ನಮಗೆ ಸಾಂಪತ್ತಿಕ ವೈಶಾಲ್ಯ ಮತ್ತು ಲೌಕಿಕ ಸುಖಗಳು ನೀಡಲಾಯಿತು, ನಮಗೆ ಅವರಿಂದ ಉತ್ತ ಸಮೃದ್ಧ ಭಾಗ ದೊರೆಯಿತು. ನನಗೆ ಭಯವಿರುವುದೇನೆಂದರೆ ನಮ್ಮ ಒಳಿತಿನ ಪ್ರತಿಫಲ ನಮಗೆ ಈ ಲೋಕದಲ್ಲಿಯೇ ಸಿಗುತ್ತಿರಬಹುದು ಎಂದು. ಹೀಗೆ ಅವರು ಅಳುತ್ತಾ ಊಟವನ್ನು ತ್ಯಜಿಸಿದರು. ಈ ಭೀತಿ ಅವರನ್ನು ಕಾಡುತ್ತಿತ್ತು. ಇದು ಅಲ್ಲಾಹನ ಭಯವಾಗಿದೆ. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್ ಸಾಹಬ್, ಪುಟ–111–112)

ಹಝ್ರತ್ ಉಮ್ಮುಲ್ ಮುಮಿನೀನ್ ಹಝ್ರತ್ ಉಮ್ಮೆ ಸಲಮ(ರ) ಹೇಳುತ್ತಾರೆ ಅವರ ಬಳಿ ಒಮ್ಮೆ ಹಝ್ರತ್ ಅಬ್ದುರ್ರಹ್ಮಾನ್(ರ) ಬಂದು ಹೇಳಿದರು: ತಾಯಿ!! ಸಾಂಪತ್ತಿಕ ಘನತೆ ನನ್ನನ್ನು ಕೊಲ್ಲದಿರಲಿ ಎಂದು ಭಾವಿಸುತ್ತೇನೆ ಏಕೆಂದರೆ ನಾನು ಖುರೈಶರಲ್ಲಿ ಹೆಚ್ಚು ಶ್ರೀಮಂತ ವ್ಯಕ್ತಿಯಾಗಿದ್ದೇನೆ. ಅವರು ಉತ್ತರಿಸಿದರು ಪುತ್ರನೇ ನೀನು ಖರ್ಚ್ ಮಾಡು ಅಂದರೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರೆ ಯಾವ ಮರಣದ ಪ್ರಶ್ನೆಯು ಇಲ್ಲ. ಏಕೆಂದರೆ ನಾನು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಹೀಗೆ ಹೇಳಿದ್ದನ್ನು ಕೇಳಿಸಿಕೊಂಡಿದ್ದೇನೆ: ನನ್ನ ಕೆಲವು ಅನುಯಾಯಿಗಳು ಹೇಗಿರುತ್ತಾರೆ ಎಂದರೆ ಅವರು ನನ್ನಿಂದ ದೂರವಾದರೆ ಅವರು ನನ್ನೊಂದಿಗೆ ಮತ್ತೆ ಮರಳಿ ಭೇಟಿಯಾಗಲು ಸಾಧ್ಯವಾಗುವುದಿಲ್ಲ. ಅಂದರೆ ಕೆಲವು ಜನರು ಈ ಸ್ಥಳಕ್ಕೆ ತಲುಪುವುದಿಲ್ಲ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೊರಗೆ ಬಂದಾಗ ಮಾರ್ಗದಲ್ಲಿ ಹಝ್ರತ್ ಉಮರ್(ರ) ರವರನ್ನು ಭೇಟಿಯಾದರು. ಅವರು ಈ ಮಾತನ್ನು ಹಝ್ರತ್ ಉಮರ್(ರ) ಅವರಿಗೆ ತಿಳಿಸಿದಾಗ ಹಝ್ರತ್ ಉಮರ್(ರ) ಸ್ವತಃ ಹಝ್ರತ್ ಉಮ್ಮೆ ಸಲ್ಮಾ(ರ) ರವರ ಬಳಿ ಬಂದು ಹೇಳಿದರು ನಾನು ನಿಮಗೆ ಅಲ್ಲಾಹನ ನಾಮದಲ್ಲಿ ಕೇಳುತ್ತೇನೆ ನಾನು ಅವರಲ್ಲಿ ಒಬ್ಬನಾಗಿದ್ದೇನೆಯೇ? ಹಝ್ರತ್ ಉಮ್ಮೆ ಸಲ್ಮಾ(ರ) ಹೇಳಿದರು ಇಲ್ಲ. ಹಝ್ರತ್ ಉಮರ್(ರ) ಅವರಿಗೆ ಹೇಳಿದರು ಇಲ್ಲ ನೀವು ಅವರಲ್ಲಿ ಇಲ್ಲ ಆದರೆ ನಿಮ್ಮ ನಂತರ ನಾನು ಯಾರ ಬಗ್ಗೆಯು ಹೇಳುವುದಿಲ್ಲ ಅವರು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ನೋಡಲು ಸಾಧ್ಯವಾಗುವುದೋ ಇಲ್ಲವೋ ಎಂದು.
(ಅಲ್ ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್ ಭಾಗ–2, ಪುಟ–848–849, ದಾರುಲ್ ಜೀಲ್ ಬೈರೂತ್)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಅಶರ ಮುಬಶ್ಶರ ಎಂದರೆ ಜೀವಿತ ಕಾಲದಲ್ಲಿಯೇ ಸ್ವರ್ಗ ಸಿಗುವುದರ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಶುಭವಾರ್ತೆ ಗಳಿಸಿದ ಹತ್ತು ಜನರಲ್ಲಿ ಒಬ್ಬರಾಗಿದ್ದರು. ಆದರೆ ಅವರಿಗೆ ಅಲ್ಲಾಹನ ಬಗ್ಗೆ ಭಯ ಎಷ್ಟಿತ್ತೆಂದರೆ ಅವರು ಯಾವಾಗಲೂ ಚಿಂತಾಮಗ್ನರಾಗಿರುತ್ತಿದ್ದರು. ಬಹಳ ಹೆಚ್ಚು ದಾನಧರ್ಮ ನೀಡುತ್ತಿದ್ದರು.

ಹಝ್ರತ್ ಅಬ್ದುಲ್ಲಾ ಬಿನ್ ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಸಿರಿಯಾದ ಕಡೆಗೆ ಹೊರಟು ಸುರ್ಗ್ ಎಂಬಲ್ಲಿಗೆ ತಲಪಿದರು. ಸುರ್ಗ್ ಸ್ಥಳವು ಸೀರಿಯ ಮತ್ತು ಹಜಾಝ್‌ನ ಒಂದು ಗಡಿಭಾಗದ ಪ್ರದೇಶದಲ್ಲಿರುವ ತಬೂಕ್‌ನ ಒಂದು ಊರಾಗಿದೆ ಅದು ಮದೀನದಿಂದ ಹದಿಮೂರು ರಾತ್ರಿಗಳ ಪ್ರಯಾಣವಾಗಿದೆ. ಅಂದರೆ ಆ ಕಾಲದಲ್ಲಿದ್ದಂತಹ ವಾಹನಗಳ ವ್ಯವಸ್ಥೆಯೊಂದಿಗೆ ಹದಿಮೂರು ರಾತ್ರಿಗಳ ಪ್ರವಾಸ ಕೈಗೊಳ್ಳಬೇಕಾಗಿತ್ತು. ಅಲ್ಲಿ ತಲುಪಿದಾಗ ಅವರನ್ನು ಸೈನ್ಯದ ದಳಪತಿ ಹಝ್ರತ್ ಅಬೂ ಉಬೈದ ಬಿನ್ ಅಲ್ ಜರ್ರಾಹ್ ಮತ್ತು ಅವರ ಸಂಗಡಿಗರು ಭೇಟಿಯಾದರು. ಈ ಘಟನೆಯು 18ನೇ ಹಿಜರಿಯಲ್ಲಿ ಹಝ್ರತ್ ಉಮರ್(ರ) ರವರ ಖಿಲಾಫತ್ ಕಾಲಘಟ್ಟದ್ದಾಗಿದೆ. ಆ ಜನರು ಹಝ್ರತ್ ಉಮರ್‌ರೊಂದಿಗೆ ಹೇಳಿದರು: ಸಿರಿಯಾದಲ್ಲಿ ಪ್ಲೇಗ್ ರೋಗ ಹಬ್ಬಿದೆ. ಹಝ್ರತ್ ಉಮರ್(ರ) ಸಮಾಲೋಚನೆ ನಡೆಸಿದ ನಂತರ ಮರಳಿ ಹೋಗುವ ನಿರ್ಧಾರವನ್ನು ಪ್ರಕಟಿಸಿದರು. ಆಗ ಅಬೂ ಉಬೈದ ಕೇಳಿದರು: ಏನು ಅಲ್ಲಾಹನ ವಿಧಿ ನಿರ್ಣಯದಿಂದ (ತಖ್‌ದೀರ್‌ನಂದ) ಪಲಾಯನ ಮಾಡುವುದು ಸರಿಯೇ? ಹಝ್ರತ್ ಉಮರ್(ರ) ಹೀಗೆ ಉತ್ತರ ನೀಡಿದರು: ನಾವು ಅಲ್ಲಾಹನ ಒಂದು ವಿಧಿ ನಿರ್ಣಯದಿಂದ ಪಲಾಯನ ಮಾಡಿ ಅಲ್ಲಾಹನ ಇನ್ನೊಂದು ವಿಧಿ ನಿರ್ಣಯದ ಕಡೆಗೆ ಹೋಗುತ್ತಿದ್ದೇವೆ. ನಿಮ್ಮ ಬಳಿ ಒಂಟೆಗಳು ಇದ್ದು ನೀವು ಅವುಗಳನ್ನು ಒಂದು ಕಣಿವೆ ಪ್ರದೇಶಕ್ಕೆ ತೆಗೆದುಕೊಂಡು ಹೋಗುವಾಗ ಅದರ ಒಂದು ಬದಿ ಹಚ್ಚಹಸುರಾಗಿದ್ದು ಇನ್ನೊಂದು ಬದಿ ಬರಡಾಗಿರುವಾಗ ನೀವು ನಿಮ್ಮ ಒಂಟೆಗಳನ್ನು ಹಚ್ಚಹಸುರಾದ ಭಾಗದಲ್ಲಿ ಮೇಯಲು ಬಿಡುವುದಿಲ್ಲವೇ. ಅದು ಅಲ್ಲಾಹನ ವಿಧಿನಿರ್ಣಯ (ತಖ್‌ದೀರ್) ಪ್ರಕಾರವೇ ಆಗಿದೆ. ನೀವು ಒಂಟೆಗಳನ್ನು ಬರಡು ಭೂಮಿಯಲ್ಲಿ ಮೇಯಿಸುವುದಾದರೆ ಅದು ಸಹ ಅಲ್ಲಾಹನ ವಿಧಿನಿರ್ಣಯ ಪ್ರಕಾರವೇ ಆಗಿದೆ. ವದರಿಗಾರ ಹೇಳುತ್ತಾರೆ: ಅಷ್ಟರೊಳಗೆ ಅಲ್ಲಿಗೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಆಗಮಿಸಿದರು. ಅವರು ಹೇಳಿದರು: ನನಗೆ ಈ ಸಮಸ್ಯೆಯ ಬಗ್ಗೆ ಜ್ಞಾನವಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ವಿಷಯಕ್ಕೆ ಸಂಬಂಧಿಸಿ ಹೀಗೆ ಹೇಳಿದುದನ್ನು ನಾನು ಆಲಿಸಿದ್ದೇನೆ. ನೀವು ಯಾವುದಾದರೂ ಪ್ರದೇಶದ ಬಗ್ಗೆ ಅಲ್ಲಿ ಸಾಂಕ್ರಾಮಿಕ ರೋಗ ಹಬ್ಬಿದೆ ಎಂದು ತಿಳಿದರೆ ಅಲ್ಲಿಗೆ ಹೋಗಬೇಡಿರಿ. ನೀವು ವಾಸಿಸುವ ಸ್ಥಳದಲ್ಲಿ ಸಾಂಕ್ರಾಮಿಕ ರೋಗ ಪ್ರಾರಂಭವಾದರೆ ನೀವು ಅಲ್ಲಿಂದ ಹೊರಗೆ ಪಲಾಯನ ಮಾಡಬೇಡಿರಿ. ಎಂದರೆ, ಎಲ್ಲಿ ಸಾಂಕ್ರಾಮಿಕ ರೋಗ ಹಬ್ಬಿದೆಯೋ ಅಲ್ಲಿಗೆ ನೀವು ಹೋಗಬಾರದು. ನೀವು ವಾಸಿಸುವ ಸ್ಥಳದಲ್ಲಿ ಸಾಂಕ್ರಾಮಿಕ ರೋಗ ಇದ್ದರೆ ಅಲ್ಲಿಂದ ನೀವು ಹೊರಗೆ ಹೋಗಬಾರದು. ನೀವು ಅಲ್ಲಿಯೇ ಇರಬೇಕು. ಅ ಮೂಲಕ ರೋಗ ಅನ್ಯರಿಗೆ ಹರಡದಿರುವಂತೆ ಜಾಗ್ರತೆ ವಹಿಸಬೇಕು.

ಇಂದು ಲಾಕ್‌ಡೌನ್ ಮೂಲಕ ಲೋಕ ಇದನ್ನು ಅನುಷ್ಠಾನಕ್ಕೆ ತರುತ್ತಿದೆ. ಸರಿಯಾದ ಸಮಯದಲ್ಲಿ ಲಾಕ್‌ಡೌನ್ ಮಾಡಿದವರು ರೋಗವನ್ನು ಸಾಕಷ್ಟು ಸೀಮಿತವಾಗಿರಿಸಿ ಹರಡದಂತೆ ಮಾಡಿದ್ದಾರೆ. ಅದರ ಬಗ್ಗೆ ನಿರ್ಲಕ್ಷ್ಯತೆಯಿಂದ ವರ್ತಿಸಿದ ಸ್ಥಳಗಳಲ್ಲಿ ರೋಗ ವ್ಯಾಪಿಸುತ್ತಾ ಇದೆ. ಒಟ್ಟಾರೆ ಹೇಳುವುದಾದರೆ ಈ ಮೂಲಭೂತ ತತ್ವವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಹಾಬರಿಗೆ ಪ್ರಥಮವಾಗಿ ಕಲಿಸಿದರು. ಹಝ್ರತ್ ಉಮರ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರ ವಿವರಣೆ ಆಲಿಸಿದ ನಂತರ ಅಲ್ಲಾಹನನ್ನು ಸ್ತುತಿಸಿ ಮರಳಿ ಹೋದರು. (ಸ ಹೀ ಹ್ ಬುಖಾರಿ ಕಿತಾಬುತ್ತಿಬ್ ಹದೀಸ್–5729)

ಹಝ್ರತ್ ಮಿಸ್ವರ್ ಬಿನ್ ಮಖ್‌ರಮ ಹೇಳುತ್ತಾರೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಉತ್ತಮ ಸ್ಥಿತಿಯಲ್ಲಿದಾಗ ಅವರಲ್ಲಿ ಕೇಳಿಕೊಳ್ಳಲಾಗುತ್ತಿತ್ತು ನೀವು ಯಾರನ್ನಾದರು ಖಲೀಫರನ್ನಾಗಿ ನೇಮಿಸಿರಿ ಎಂದು ಅದರೆ ಅವರು ಅದನ್ನು ಒಪ್ಪುತ್ತಿರಲಿಲ್ಲ. ಒಮ್ಮೆ ಅವರ ವೇದಿಕೆಗೆ ಬಂದು ಹೇಳಿದರು: ಒಂದು ವೇಳೆ ನಾನು ನಿಧನ ಹೊಂದಿದರೆ ನಮ್ಮ ಸಮಸ್ಯೆ ಈ ಆರು ಜನರ ಹೊಣೆಯಾಗುವುದು ಅವರ ಬಗ್ಗೆ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಒಪ್ಪಿದ್ದರು. ಅಂದರೆ ಹಝ್ರತ್ ಅಲಿ ಬಿನ್ ಅಬೂ ತಾಲಿಬ್(ರ), ಹಝ್ರತ್ ಝುಬೈರ್ ಬಿನ್ ಉಮೂಮ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ), ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಮತ್ತು ಹಝ್ರತ್ ಸಅದ್ ಬಿನ್ ಮಾಲಿಕ್(ರ) ಆಗಿದ್ದಾರೆ. ನೆನಪಿಡಿರಿ!! ನಾನು ನಿಮ್ಮೆಲರನ್ನು ನಿರ್ಣಯಗಳನ್ನು ಕೈಗೊಳ್ಳುವಾಗ ಅಲ್ಲಾಹನೊಂದಿಗೆ ಭಯಭಕ್ತಿ ಹೊಂದಲು ಮತ್ತು ಹಂಚಿಕೆ ಮಾಡುವಾಗ ನ್ಯಾಯದಿಂದ ಹಂಚಬೇಕು ಎಂದು ಆದೇಶಿಸುತ್ತೇನೆ. ಅಬೂ ಜಾಫರ್(ರ) ಹೇಳುತ್ತಾರೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರು ಶೂರದ ಸದಸ್ಯರನ್ನು ಕೇಳಿದರು ತಮ್ಮ ಸಮಸ್ಯೆಗಳಿಗೆ ಪರಸ್ಪರ ಸಲಹೆಗಳನ್ನು ಯಾಚಿಸಿರಿ ನಿಮ್ಮಲ್ಲಿ ಇಬ್ಬರು ಇಬ್ಬರು ಆದರೆ ಮತ್ತೊಮ್ಮೆ ಸಮಾಲೋಚನೆ ನಡೆಸಿರಿ ತದನಂತರ ನಾಲ್ಕು ಎರಡು ಆದರೆ ಬಹುಮತವನ್ನು ಸ್ವೀಕರಿಸಿರಿ. ಝೈದ್ ಬಿನ್ ಅಸ್ಲಮ್ ತಮ್ಮ ತಂದೆಯವರೊಂದಿಗೆ ವರದಿ ಮಾಡುತ್ತಾರೆ ಹಝ್ರತ್ ಉಮರ್(ರ) ಹೇಳುತ್ತಾರೆ: ಒಂದುವೇಳೆ ಮೂರು ಮೂರು ಜನರಾಗಿ ಮತದಾನ ಮಾಡಿದರೆ ಯಾವ ಭಾಗದಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಇದ್ದಾರೆಯೋ ಆ ಮೂರು ಜನರು ಆಯ್ಕೆ ಮಾಡಿರಿ ಮತ್ತು ಅವರೊಂದಿಗೆ ವಿಧೇಯತೆಯನ್ನು ತೋರಿಸಿರಿ.

ಅಬ್ದುರ್ರಹ್ಮಾನ್ ಬಿನ್ ಸಯೀದ್(ರ) ವರದಿ ಮಾಡುತ್ತಾರೆ ಹಝ್ರತ್ ಉಮರ್(ರ) ಗಾಯಗೊಂಡಾಗ ಹೇಳಿದರು: ಸುಹೈಬ್(ರ) ನೀವು ಜನರ ನಮಾಝ್ ನಿರ್ವಹಿಸುವಿರಿ. ಅಂದರೆ ಹಝ್ರತ್ ಸುಹೈಬ್(ರ) ಅವರನ್ನು ಇಮಾಮುಸ್ಸಲಾತನ್ನಾಗಿ ನೇಮಿಸಿದರು. ಈ ಮಾತನ್ನು ಹಝ್ರತ್ ಉಮರ್(ರ) ಮೂರು ಸಲ ಹೇಳಿದರು. ತಮ್ಮ ಈ ಸಮಸ್ಯೆಯಲ್ಲಿ ಸಮಾಲೋಚನೆ (ಮುಶಾವಿರತ್) ನಡೆಸಿರಿ ಮತ್ತು ನಿಮ್ಮ ಈ ಸಮಸ್ಯೆಯನ್ನು ಆ ಆರು ಜನರಿಗೆ ಅರ್ಪಿಸಿರಿ. ಯಾರು ನಿಮ್ಮ ಬಗ್ಗೆ ಭಿನ್ನಭಿಪ್ರಾಯ ಇರುಸುವರೋ ಅಂದರೆ ಯಾರು ವಿರೋಧ ವ್ಯಕ್ತ ಪಡಿಸುತ್ತಾರೋ ಆತನ ಕರಳನ್ನು ಕತ್ತರಿಸಿರಿ. ಇನ್ನೊಂದು ಆದೇಶ ಏನಂದರೆ ಅವಶ್ಯಕತೆ ಬೀರಿದಾಗ, ಖಿಲಾಫತ್ ಚುನಾವಣೆಯ ಸಂದರ್ಭದಲ್ಲಿ ಈ ಆರು ಜನರಲ್ಲೆ ಈ ಚುನಾವಣೆ ಆಗುವುದು. ಅಲ್ಲಿಯ ತನಕ ಹಝ್ರತ್ ಝುಹೈಬ್(ರ) ರವರು ಇಮಾಮುಸ್ಸಲಾತ್‌ನ ಕಾರ್ಯ ನಿರ್ವಹಿಸುವರು. ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ)ರವರು ತಮ್ಮ ನಿಧನದ ಕೆಲವು ಗಂಟೆಗಳ ಮುಂಚೆ ಹಝ್ರತ್ ಅಬೂ ತಲ್‌ಹ(ರ) ರವರ ಕಡೆ ಒಂದು ಸಂದೇಶವನ್ನು ಕಳುಹಿಸಿದರು. ಅವರು ಹೇಳಿದರು ಎಲೈ ಅಬೂ ತಲ್‌ಹ(ರ)!! ನೀವು ನಿಮ್ಮ ಗೋತ್ರದಿಂದ ಐವತ್ತು ಅನ್ಸಾರ್‌ಗಳನ್ನು ಕರೆದುಕೊಂಡು ಆ ಶೂರ ಸದಸ್ಯರ ಬಳಿ ಹೋಗಿ ಅವರನ್ನು ಮೂರು ದಿವಸದ ತನಕ ಅವರು ಯಾರನ್ನಾದರು

ಅಮೀರನ್ನಾಗಿ ನೇಮಿಸಿದ ತನಕ ಅವರೊಂದಿಗಿರಿ. ಅಲ್ಲಾಹನೇ!! ನೀವು ಅವರ ಮೇಲೆ ನನ್ನ ಖಲೀಫನಾಗಿರುವೆ.

ಅಸ್‌ಹಾಖ್ ಬಿನ್ ಅಬ್ದುಲ್ಲಾ ಹೇಳುತ್ತಾರೆ ಹಝ್ರತ್ ಅಬೂ ತಲ್‌ಹ(ರ) ತಮ್ಮ ಸಂಗಡಿಗರೊಂದಿಗೆ ಸ್ವಲ್ಪ ಸಮಯ ಹಝ್ರತ ಉಮರ್(ರ) ರವರ ಖಬರ್ ಬಳಿ ಬಂದು ನಿಂತರು. ತದನಂತರ ಅವರು ಶೂರ ಸದಸ್ಯರೊಂದಿಗೆ ಇದ್ದರು. ಅನಂತರ ಆ ಸದಸ್ಯರು ತಮ್ಮ ಸಮಸ್ಯೆಯನ್ನು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರಿಗೆ ತಿಳಿಸಿದರು ಅವರು ಯಾರನ್ನಾದರು ಅಮೀರನ್ನಾಗಿ ನೇಮಿಸಬಹುದು ಎಂದು. ಹಝ್ರತ್ ಅಬೂ ತಲ್‌ಹ(ರ) ತಮ್ಮ ಸಂಗಡಿಗರೊಂದಿಗೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರ ಬಳಿ ಹಝ್ರತ್ ಉಸ್ಮಾನ್(ರ) ರವರನ್ನು ಬೈಅತ್ ಮಾಡುವ ತನಕ ಇದ್ದರು.

ಹಝ್ರತರ್ ಅಬೂ ಸಲ್ಮಾ(ರ) ರವರ ತಂದೆ ವರದಿ ಮಾಡುತ್ತಾರೆ: ಮೊಟ್ಟಮೊದಲು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ರವರು ಹಝ್ರತ್ ಉಸ್ಮಾನ್(ರ) ರವರ ಬೈಅತ್ ಮಾಡಿದರು. ಅನಂತರ ಹಝ್ರತ್ ಅಲಿ(ರ) ಬೈಅತ್ ಮಾಡಿದರು. ಹಝ್ರತ್ ಉಮರ್(ರ) ರವರ ಸ್ವತಂತ್ರಗೊಳಿಸಿದ ಗುಲಾಮ ಉಮರ್ ಬಿನ್ ಉಮೈರ ತಮ್ಮ ಪಿತಾಮಹಾರವರಿಂದ ವರದಿ ಮಾಡುತ್ತಾರೆ: ಮೊಟ್ಟಮೊದಲು ಹಝ್ರತ್ ಅಲಿ(ರ) ರವರು ಹಝ್ರತ್ ಉಸ್ಮಾನ್(ರ) ರವರ ಬೈಅತ್ ಮಾಡಿದರು. ತದನಂತರ ಎಲ್ಲರೂ ಬೈಅತ್ ಮಾಡಿದರು. (ಅತ್ತಬಖಾತುಲ್ ಕುಬ್ರ ಭಾಗ–3, ಪುಟ–44–46, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಬುಖಾರಿಯ ಒಂದು ವರದಿ ಹೀಗಿದೆ: ಹಝ್ರತ್ ಉಮರ್(ರ) ನಮಾಝ್ ಮಾಡಲು ನಿಂತು ಅಲ್ಲಾಹು ಅಕ್‌ಬರ್ ಎಂದು ಉಚ್ಚರಿಸಿದಾಗ ಅವರ ಮೇಲೆ ಮಾರಣಾಂತಿಕ ಆಕ್ರಮಣ ನಡೆಯಿತು. ಗಾಯಗೊಂಡ ಅವರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರ ಕೈ ಹಿಡಿದು ಇಮಾಮತ್ ವಹಿಸಲು ಮುಂದೆ ಸರಿಸಿದರು. ಆಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹ್ರಸ್ವವಾಗಿ ನಮಾಝ್ ನಿರ್ವಹಿಸಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಸ್ಮಾನ್ ಖಲೀಫರಾಗಿ ಚುನಾಯಿಸಲ್ಪಡುವಾಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ವಹಿಸಿದ ಪಾತ್ರದ ಬಗ್ಗೆ ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಉಸ್ಮಾನ್(ರ) ರವರ ಖಿಲಾಫತ್ ಚುನಾವಣೆಯನ್ನು ವಿವರಿಸುತ್ತ ಹೇಳುತ್ತಾರೆ: ಹಝ್ರತ್ ಉಮರ್(ರ) ಗಾಯಗೊಂಡಾಗ ಇದು ತಮ್ಮ ಕೊನೆಯಗಳಿಗೆ ಎಂದು ಭಾವಿಸಿದರು. ಆದ್ದರಿಂದ ಅವರು ಆರು ಜನರೊಂದಿಗೆ ಒಂದು ವಸಿಯ್ಯತ್ ಮಾಡಿದರು. ಈ ಆರು ಜನರಲ್ಲಿ ಯಾರನ್ನಾದರು ಮುಂದೆ ಖಲೀಫರನ್ನಾಗಿ ನೇಮಿಸಿಕೊಳ್ಳಿ ಎಂದು. ಆ ಆರು ಜನರು: ಹಝ್ರತ್ ಉಸ್ಮಾನ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ಸಅದ್ ಬಿನ್ ಅಬಿ ವಖಾಸ್(ರ), ಹಝ್ರತ್ ಝುಬೈರ್(ರ) ಮತ್ತು ಹಝ್ರತ್ ತಲ್‌ಹ(ರ). ಅದರೊಂದಿಗೆ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಅವರನ್ನು ಸಹ ಈ ಸಮಾಲೋಚನೆಯಲ್ಲಿ ಸೇರಿಸಿದರು ಆದರೆ ಖಿಲಾಫತ್‌ನ ಹಕ್ಕು ನೀಡಿರಲಿಲ್ಲ. ಇವರೆಲ್ಲರು ಮೂರು ದಿವಸದಲ್ಲಿ ನಿರ್ಣಯವನ್ನು ಕೈಗೊಳ್ಳುವರು ಎಂದು ವಸಿಯ್ಯತ್ ಮಾಡಿದರು ಅದೇ ರೀತಿ ಮೂರು ದಿವಸಕ್ಕಾಗಿ ಹಝ್ರತ್ ಸುಹೇಬ್(ರ) ಅವರನ್ನು ಇಮಾಮುಸ್ಸಲಾತನ್ನಾಗಿ ನೇಮಿಸಿದರು. ಮತ್ತು ಮಿಖ್‌ರಾದ್ ಬಿನ್ ಅಸ್ವದ್(ರ) ಅವರಿಗೆ ಈ ಸಮಾಲೋಚನೆಯ ಮೇಲ್ವಿಚಾರಕರನ್ನಾಗಿ ನೇಮಿಸಿ ಅವರಿಗೆ ಎಲ್ಲಾರನ್ನು ಒಂದು ಕಡೆ ಜಮಾಯಿಸಿ ನಿರ್ಣಯ ತೆಗೆದುಕೊಳ್ಳಲು ಒತ್ತಾಯಿಸಿರಿ ಮತ್ತು ತಾವು ಸ್ವತಃ ಖಡ್ಗವನ್ನು ತೆಗೆದುಕೊಂಡು ಬಾಗಿಲಿನ ಮೇಲೆ ಕಾವಲು ನೀಡಬೇಕೆಂದು ಉಪದೇಶಿಸಿದರು.

ಅದೇ ರೀತಿ ಅವರು ಹೇಳಿದರು ಯಾರ ಬಗ್ಗೆ ಹೆಚ್ಚು ಜನರು ತಮ್ಮ ಅಭಿಪ್ರಾಯವನ್ನು ನೀಡುತ್ತಾರೋ ಅವರ ಬೈಅತ್ ಮಾಡಿರಿ ಯಾರಾದರು ಇದನ್ನು ಒಪ್ಪದಿದ್ದರೆ ಅವನನ್ನು ಕೊಂದು ಹಾಕಿರಿ. ಆದರೆ ಅವರಲ್ಲಿ ಎರಡು ಕಡೆ ಮೂರು ಮೂರು ಜನರಾದಲ್ಲಿ ಅಬ್ದುಲ್ಲ ಬಿನ್ ಉಮರ್(ರ) ಯಾರನ್ನು ಆಯ್ಕೆ ಮಾಡುತ್ತಾರೋ ಅವರು ಖಲೀಫರಾಗಿರುತ್ತಾರೆ. ಒಂದು ವೇಳೆ ಈ ನಿರ್ಧಾರವನ್ನೂ ಯಾರು ಒಪ್ಪದಿದ್ದರೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಖಲೀಫರಾಗುವರು. ಕೊನೆಗೆ ಐದು ಸಹಾಬರವರು ಸಮಾಲೋಚನೆ ನಡೆಸುತ್ತಾರೆ. ಏಕೆಂದರೆ ತಲ್‌ಹ ಆ ಸಂದರ್ಭದಲ್ಲಿ ಮದೀನದಲ್ಲಿರಲಿಲ್ಲ ಆದ್ದರಿಂದ ಯಾವುದೇ ಫಲ ಸಿಗಲಿಲ್ಲ. ಒಂದು ಸುದೀರ್ಘ ವಾದವಿವಾದದ ನಂತರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳಿದರು: ಸರಿ! ನಿಮ್ಮಲ್ಲಿ ಯಾರು ತಮ್ಮ ಹೆಸರು ಹಿಂದೆಗೆದುಕೊಳ್ಳುವಿರೋ ಹೇಳಿ ಎಂದರು. ಅದಕ್ಕೆ ಯಾರು ಪ್ರತಿಕ್ರಿಯೆ ನೀಡಲಿಲ್ಲ ಮತ್ತು ಅಬ್ದುರ್ರಹ್ಮಾನ್(ರ) ಹೇಳಿದರು ಸರಿ ಎಲ್ಲದಕ್ಕು ಮೊದಲು ನಾನು ನನ್ನ ಹೆಸರು ಹಿಂದೆಗೆದುಕೊಳ್ಳುತ್ತೇನೆ. ಅನಂತರ ಹಝ್ರತ್ ಉಸ್ಮಾನ್(ರ) ಹೇಳಿದರು ಮತ್ತು ಇನ್ನಿಬರು ಹೆಸರು ಹಿಂತೆಗುದುಕೊಂಡರು. ಹಝ್ರತ್ ಅಲಿ(ರ) ಸುಮ್ಮನಿದ್ದರು. ಕೊನೆಗೆ ಅವರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರಿಂದ ಪ್ರತಿಜ್ಞೆ ಪಡೆದುಕೊಂಡರು ಅವರು ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಯಾವುದೇ ರೀತಿಯ ವಿನಾಯತಿ ನೀಡುವುದಿಲ್ಲ ಎಂದು. ಅವರು ಪ್ರತಿಜ್ಞೆ ಮಾಡಿದರು ಮತ್ತು ಎಲ್ಲಾ ಕಾರ್ಯಗಳು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರಿಗೆ ನೀಡಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮೂರು ದಿವಸ ಮದೀನದಲ್ಲಿ ಎಲ್ಲರ ಮನೆಗಳಿಗೆ ಹೋಗಿ ಎಲ್ಲಾ ಮಹಿಳೆ ಹಾಗೂ ಪುರುಷರಲ್ಲಿ ವಿಚಾರಿಸಿದಾಗ ಅವರೆಲ್ಲರು ಹಝ್ರತ್ ಉಸ್ಮಾನ್(ರ) ಅವರ ಹೆಸರು ಖಿಲಾಫತ್‌ಗಾಗಿ ಹೇಳಿದರು. ಆದ್ದರಿಂದ ಅವರು ಹಝ್ರತ್ ಉಸ್ಮಾನ್(ರ) ಪರವಾಗಿ ತಮ್ಮ ನಿರ್ಧಾರ ಪ್ರಕಟಿಸಿದರು ಹೀಗೆ ಅವರು ಖಲೀಫರಾದರು. (ಖಿಲಾಫತೆ ರಾಶಿದಹ್, ಅನ್ವಾರುಲ್ ಉಲೂಮ್ ಸಂಪುಟ–15, ಪುಟ–484–485)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫರ ಜೀವಿತದ ಕೆಲವು ಘಟನೆಗಳ ಬಗ್ಗೆ, ಅವರ ಒಳಿತುಗಳ ಬಗ್ಗೆ, ಅವರ ಸ್ವಭಾವಗುಣಗಳ ಬಗ್ಗೆ ಇನ್ನೂ ಸ್ವಲ್ಪ ಭಾಗ ವಿವರಿಸಲು ಬಾಕಿಯಾಗಿ ಉಳಿದಿದೆ. ಇನ್‌ಶಾಅಲ್ಲಾಹ್ ಮುಂದಿನ ಖುತ್‌ಬದಲ್ಲಿ ಅವುಗಳನ್ನು ವಿವರಿಸುವೆನು.

*****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕಂಬನಿ ಮಿಡಿದರೆ ಸಾಕಾಗುತ್ತದೆ ಸ್ವರ್ಗಕ್ಕೆ ಹೋಗಲು. ಅದರ ಹೊರತು ಇನ್ನೇನು ಮಾಡುವ ಆವಶ್ಯಕತೆ ಇಲ್ಲ. ಕ್ರೈಸ್ತರೂ ಅದೇ ರೀತಿ ಹೇಳುತ್ತಾರೆ. ಮಸೀಹರ ಶಕ್ತಿ ನಮಗೆ ಮುಕ್ತಿ ನೀಡುವುದು ಎಂದು ಈಗ ನಾವು ಕೇಳುತ್ತೇವೆ. ನಿಮ್ಮ ಪಾಪಗಳ ಬಗ್ಗೆ ಕೇಳಲಾಗುವುದು ಮತ್ತು ಅದಕ್ಕೆ ಶಿಕ್ಷೆಯನ್ನೂ ಅನುಭವಿಸಬೇಕಾಗುವುದು ಎಂದರೆ ಮತ್ತು ಅದು ಯಾವ ರೀತಿಯ ಮುಕ್ತಿಯಾಗಿದೆ?

ನಿಜವಾಗಿಯೂ ಆ ತತ್ವಗಳ ಪರಿಣಾಮ ಭಯಂಕರವಾದುದಾಗಿದೆ. ಆ ತತ್ವ ಇಲ್ಲದಿರುತ್ತಿದ್ದರೆ ಯೋರೋಪ್ ದೇಶಗಳಲ್ಲಿ ಅಷ್ಟೊಂದು ಯಥೇಚ್ಛ ರೀತಿಯಲ್ಲಿ ಅನೈತಿಕ ಕಾರ್ಯಗಳು ಉಂಟಾಗುತ್ತಿರಲಿಲ್ಲ. ಅಲ್ಲದೆ ಈಗ ಬಂದ ಹಾಗೆ ಭೀಕರ ಪ್ರವಾಹ ಬರುತ್ತಿರಲಿಲ್ಲ. ಲಂಡನ್ ಮತ್ತು ಪ್ಯಾರಿಸ್‌ಗಳ ಹೋಟೆಲುಗಳಲ್ಲಿ ಮತ್ತು ಪಾರ್ಕುಗಳಲ್ಲಿ ಏನೆಲ್ಲಾ ಆಗುತ್ತದೆ ಎಂದು ಹೋಗಿ ನೋಡಿರಿ ಮತ್ತು ಅಲ್ಲಿಂದ ಬಂದ ಜನರನ್ನು ಕೇಳಿರಿ. ದಿನನಿತ್ಯ ವಾರ್ತ ಪತ್ರಿಕೆಗಳಲ್ಲಿ ಅನೈತಿಕ ಸಂಬಂಧವಾಗಿ ಜನಿಸಿದ ಮಕ್ಕಳ ಪಟ್ಟಿ ಪ್ರಕಟಗೊಳ್ಳುತ್ತಿದೆ.

**ಪಾಪ ಪರಿಹಾರ ತತ್ವವು ದೈವಿಕ ನಿಯಮಕ್ಕೆ ವಿರುದ್ಧವಾಗಿದೆ**

ನಾವು ತತ್ವವನ್ನೇ ನೋಡುವೆವು. ನಮ್ಮ ತತ್ವಗಳಲ್ಲಿ ಬರೆಯಲಾಗಿದೆ. **"ಫಮೈಂಯಾಮಲ್ ಮಿಸ್‌ಖಾಲ ಝರ್ರತಿನ್ ಖೈರೈಂಯುರಹ್"** (ಅಲ್‌ಝಿಲ್‌ಝಾಲ್:8) ಇದರ ಪ್ರಭಾವ ಏನು ಬೀರಬಹುದು ಎಂದು ನೀವು ಸ್ವಯಂ ಯೋಚಿಸಿಕೊಳ್ಳಿ. ಅದೇನೆಂದರೆ ಮನುಷ್ಯನು ಕರ್ಮದ ಪ್ರಾಮುಖ್ಯತೆ ತಿಳಿಯುವನು ಮತ್ತು ಸತ್ಕರ್ಮಗೈಯಲು ಪ್ರಯತ್ನ ಪಡುವನು. ಅದನ್ನು ಹೊರತುಪಡಿಸಿ ಮನುಷ್ಯನು ಕರ್ಮದಿಂದ ಮುಕ್ತಿ ಪಡೆಯಲು ಸಾಧ್ಯವಿಲ್ಲ ಎಂದಾದರೆ ಆ ತತ್ವ ಮನುಷ್ಯನನ್ನು ಅಧೀರಗೊಳಿಸುತ್ತದೆ ಮತ್ತು ಪ್ರಯತ್ನದಿಂದ ಹಿಂಜರಿಯುತ್ತಾನೆ. ಅವನನ್ನು ಅಸಹಾಯನನ್ನಾಗಿ ಮಾರ್ಪಡಿಸುತ್ತದೆ. ಅದರಿಂದ ಇನ್ನೊಂದು ವಿಷಯ ತಿಳಿದು ಬರುವುದೇನೆಂದರೆ ಪಾಪ ಪರಿಹಾರದ ತತ್ವವು ಮಾನವಿಯ ಗುಣಗಳನ್ನು ಅಪಮೌಲ್ಯಗೊಳಿಸುತ್ತದೆ. ಏಕೆಂದರೆ ಅಲ್ಲಾಹನು ಮಾನವ ಗುಣಗಳಲ್ಲಿ ಅಭಿವೃದ್ಧಿ ಹೊಂದುವ ಶಕ್ತಿ ಇಟ್ಟಿದ್ದಾನೆ. ಆದರೆ ಪಾಪ ಪರಿಹಾರದ ತತ್ವವು ಈ ಅಭಿವೃದ್ಧಿಯಿಂದ ತಡೆಯುತ್ತದೆ. ಈಗಾಗಲೇ ನಾನು ಹೇಳಿದ್ದೇನೆ ಪಾಪ ಪರಿಹಾರದ ತತ್ವವನ್ನು ನಂಬುವವರು ಎಲ್ಲ ಅಡೆತಡೆಯಿಂದ ಮುಕ್ತ ಎಂದು ಭಾವಿಸಲು ಆ ತತ್ವವೇ ಕಾರಣವಾಗಿದೆ. ಅದರ ಪರಿಣಾಮವಾಗಿಯೇ ನಾಯಿಗಳ ರೀತಿಯಲ್ಲಿ ವ್ಯಭಿಚಾರಗಳಾಗುತ್ತಿದೆ. ಲಂಡನ್ನಿನ ಹಾಯಿಡ್ ಪಾರ್ಕಿನಲ್ಲಿ ವ್ಯಭಿಚಾರಗಳಾಗುತ್ತವೆ ಮತ್ತು ಅಸಂಬಂಧಿತ ಮಕ್ಕಳ ಜನನವಾಗುತ್ತೆ. ಆದುದರಿಂದ ನಮಗೆ ಮೌಖಿಕ ಕಾರ್ಯಗಳಿಗಷ್ಟೆ ಸೀಮಿತವಾಗಿರಬಾರದು ಅದರ ಬದಲು ನಡತೆಯೂ ಜೊತೆಯಲ್ಲಿರಬೇಕಾಗಿದೆ. ಯಾರು ಒಳ್ಳೆಯ ನಡತೆ (ಕರ್ಮಗಳ) ಯ ಅವಶ್ಯಕತೆಗಳ ಬಗ್ಗೆ ಭಾವಿಸುವುದಿಲ್ಲವೋ ಅವನು ಮೂಢನೂ ದೂರದೃಷ್ಟಿ ಹೊಂದಿರದವನಾಗಿರುತ್ತಾನೆ. ದೈವಿಕ ನಿಯಮಗಳಲ್ಲಿ ಕರ್ಮಗಳ ಮತ್ತು ಅದರ ಪರಿಣಾಮಗಳ ಉದಾಹರಣೆಗಳಿವೆ. ಆದರೆ ಪಾಪ ಪರಿಹಾರದ ಉದಾಹರಣೆ ಎಲ್ಲೂ ಇಲ್ಲ. ಉದಾಹರಣೆಗೆ ಹಸಿವು ಆದರೆ ಊಟ ಮಾಡುತ್ತೇವೆ ಅದರ ಫಲವಾಗಿ ಹಸಿವು ನೀಗುತ್ತದೆ. ಅಥವಾ ಬಾಯಾರಿಕೆ ಆಗುತ್ತದೆ, ನೀರು ಕುಡಿದರೆ ನೀಗುತ್ತದೆ. ಅದರಿಂದ ತಿಳಿದುಬಂದ ವಿಷಯವೆಂದರೆ ಊಟ ಮಾಡಿದ್ದರಿಂದ ಅಥವಾ ನೀರು ಕುಡಿದ ಪರಿಣಾಮವಾಗಿ ಹಸಿವು ಅಥವಾ ಬಾಯಾರಿಕೆ ದೂರವಾಗಿದೆ. ಅದರ ಬದಲು ಒಬ್ಬನಿಗೆ ಹಸಿವು ಆದರೆ ಇನ್ನೊಬ್ಬ ರೊಟ್ಟಿ ತಿಂದರೆ ಅವನ

ಹಸಿವು ನೀಗುವುದೇ? ದೈಹಿಕ ನಿಯಮಗಳಲ್ಲಿ ಅದರ ಸಾಧ್ಯತೆಗಳಿದ್ದರೆ ಬಹುಶಃ ಪಾಪ ಪರಿಹಾರದ ಆ ನಿಯಮ ಒಪ್ಪಿಕೊಳ್ಳಲು ಕಾರಣವಾಗುತಿತ್ತು. ಆದರೆ ದೈವಿಕ ನಿಯಮಗಳಲ್ಲಿ ಅದಕ್ಕೆ ಅವಕಾಶ ಇಲ್ಲ ಎಂದಾದರೆ ಅದನ್ನು ಮನ್ನಿಸಲು ಹೇಗೆ ಸಾಧ್ಯ? ಸಾಮಾನ್ಯ ಜನರಲ್ಲೂ ಆ ಉದಾಹರಣೆ ಆ ತತ್ವ ಕಾಣಲು ಸಾಧ್ಯವಾಗುತ್ತಿಲ್ಲ. ಒಬ್ಬನು ಹತ್ಯೆ ಮಾಡಿದರೆ ಇನ್ನೊಬ್ಬನಿಗೆ ಶಿಕ್ಷೆ ಕೊಟ್ಟದ್ದಾಗಿ ಎಂದು ಕಾರಣಲಿಲ್ಲ. ಅಂತೂ ಆ ತತ್ವವು ನಿರಾಧಾರಾವಾಗಿದೆ ಅದರ ಯಾವ ಉದಾಹರಣೆಯೂ ನಮಗೆ ಕಾಣಲು ಸಿಗುತ್ತಿಲ್ಲ. **(ಮಲ್‌ಫೂಝಾತ್ ಸಂ:1, ಪುಟ:162 ರಿಂದ 165 ಮುದ್ರಣ 2018 ಖಾದಿಯಾನ್)**

---

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಹೂವು ಪ್ರಸ್ತುತಪಡಿಸುವ ಜನರಾಗಿದ್ದೇವೆ. ಆದರೆ ಈ ಪ್ರಸ್ತುತಪಡಿಸುತ್ತಿರುವ ಹೂವುಗಳು ನಿಮ್ಮ ಮುಂದೆ ಅರ್ಪಿಸುತ್ತಿರುವ ಹೂವುಗಳು, ಆ ಹೂವುಗಳನ್ನು ಜನರು ಮೆಚ್ಚಿ ಹಣ ಖರ್ಚು ಮಾಡಿ ಖರೀದಿಸುತ್ತಿದ್ದಾರೆ. ಈ ಹೂವುಗಳಂತೂ ತಮ್ಮ ಜಾಗದಲ್ಲಿ ತಾತ್ಕಾಲಿಕ ಸಮಯಯವಾಗಿವೆ. ಅದರ ಪರಿಮಳವು ತಾತ್ಕಾಲಿಕವಾಗಿದೆ. ಆದರೆ ಎಲ್ಲದಕ್ಕಿಂತ ಉತ್ತಮ ಹೂವುಗಳು ಅಹ್ಮದಿಯಾ ಜಮಾಅತ್ ಪ್ರಸ್ತುತಪಡಿಸುತ್ತಿದೆ. ಅದು ಉತ್ತಮ ನಡತೆಯಾಗಿದೆ. ಅದನ್ನು ಸಮುದಾಯಗಳು ಎಂದೂ ಮರೆಯಲಾರರು ಮತ್ತು ಲೋಕದಲ್ಲಿ ಜಮಾಅತ್ತಿನ ಈ ಉತ್ತಮ ನಡತೆಯನ್ನು ಪ್ರಶಂಸಿಸಲಾಗುತ್ತಿದೆ. ಇಂತಹ ಹೂವುಗಳನ್ನು ಅಹ್ಮದಿಯಾ ಜಮಾಅತ್ ಪ್ರಸ್ತುತಪಡಿಸುತ್ತಿದೆ.

ಹುಝೂರ್ ಹೇಳಿದರು. ಇನ್ನೊಂದು ವಿಷಯ ಇಲ್ಲಿ ನೆರೆಹೊರೆಯರ ಕುರಿತು ಹೇಳಲಾಯಿತು. ನೆರೆಹೊರೆಯರ ಬಗ್ಗೆ ಇಸ್ಲಾಮ್ ಬಹಳಷ್ಟು ಒತ್ತು ನೀಡುತ್ತದೆ. ಪವಿತ್ರ ಖುರ್‌ಆನಿನಲ್ಲಿಯೂ ಈ ಬಗ್ಗೆ ಪದೇ ಪದೇ ಪ್ರಸ್ತಾಪಿಸಲಾಗಿದೆ. ಇಸ್ಲಾಮ್‌ನ ಸ್ಥಾಪಕರಾದ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ರಂತೂ ನೆರೆಹೊರೆಯರ ಹಕ್ಕುಗಳ ಕುರಿತು ಎಷ್ಟೊಂದು ಗಮನ ಸೆಳೆದಿದ್ದಾರೆಂದರೆ ಸಹಾಬರು ಹೇಳುತ್ತಿದ್ದರು. ನಮ್ಮ ಆಸ್ತಿಯಲ್ಲಿ ನಮ್ಮ ವಾರಸುದಾರರ ಹಕ್ಕಿರುವಂತೆ ನೆರೆಹೊರೆಯವರ ಹಕ್ಕು ಇರಬಹುದೆಂಬ ಗುಮಾನಿ ಉಂಟಾಯಿತು. ಇಸ್ಲಾಮ್ ಆ ಮಟ್ಟಕ್ಕೆ ನೆರೆಹೊರೆಯವರ ಹಕ್ಕುಗಳ ಬಗ್ಗೆ ಕಾಳಜಿ ವಹಿಸಿದೆ. ಅಲ್ಲದೇ ನೆರೆಹೊರೆಯವರೆಂದರೆ ಕೇವಲ ನಮ್ಮ ಗೋಡೆಗೆ ಒತ್ತಿಕೊಂಡಿರುವ ಮನೆಯಲ್ಲ ಅಥವಾ ಒಂದೆ ಕಟ್ಟಡದಲ್ಲಿರುವ ಅಂತಸ್ತುಗಳಲ್ಲ ಬದಲಾಗಿ ನಿಮ್ಮ ಜೊತೆಯಲ್ಲಿ ಪ್ರಯಾಣಿಸುವವನು ನಿಮ್ಮ ನೆರೆಹೊರೆಯವನಾಗಿದ್ದಾನೆ, ನಿಮ್ಮ ನಗರದಲ್ಲಿರುವವರೂ ನೆರೆ ಹೊರೆಯವರಾಗಿದ್ದಾರೆ. ನಿಮ್ಮ ಕಚೇರಿಯಲ್ಲಿ ಕೆಲಸ ಮಾಡುವವರು ನೆರೆ ಹೊರೆಯವರಾಗಿದ್ದಾರೆ. ಅವರೆಲ್ಲರ ಹಕ್ಕುಗಳನ್ನು ಪಾಲಿಸುವುದು ಅಹ್ಮದಿಯರ ಕರ್ತವ್ಯವಾಗಿದೆ. ಒಬ್ಬ ನಿಜವಾದ ಮುಸಲ್ಮಾನರ ಕರ್ತವ್ಯವಾಗಿದೆ. ಇದಾಗಿದೆ ಇಸ್ಲಾಮ್ ಪ್ರಸ್ತಾಪಿಸುವ ನೆರೆಹೊರೆಯವರ ಹಕ್ಕುಗಳು. ಅದನ್ನು ನಾವು ಪಾಲಿಸುವುದು ಕಡ್ಡಾಯವಾಗಿ ಓರ್ವ ಅಹ್ಮದಿ ಮುಸಲ್ಮಾನನ ಕರ್ತವ್ಯವಾಗಿದೆ. ಅಹ್ಮದಿಯವರಿಗೆ ಸದಾ ಈ ಕರ್ತವ್ಯಗಳನ್ನು ಪಾಲಿಸುವುದತ್ತ ನಿಗಾವಹಿಸಬೇಕಾಗಿದೆ. ನಾನು ಅವರಿಗೆ ಹೇಳುವುದು ಮೊದಲಿಗಿಂತ ಹೆಚ್ಚು ಈ ಕರ್ತವ್ಯಗಳ ಬಗ್ಗೆ ಗಮನಹರಿಸಬೇಕು. ಮೊದಲಿಗಿಂತ ಹೆಚ್ಚು ಆರಾಧನೆಯ ಕಡೆ ಗಮನವಹಿಸಬೇಕು. ಮೊದಲಿಗಿಂತ ಹೆಚ್ಚು ಉತ್ತಮ ನಡತೆ ತಮ್ಮ ನೆರೆಹೊರೆಯವರಿಗೆ ತೋರಿಸಬೇಕು. ತಮ್ಮ ನಗರವಾಸಿಗಳಿಗೆ ತೊರಿಸಬೇಕು. ಅಲ್ಲದೇ ಈ ದೇಶದ ಜನರಿಗೂ ತೋರಿಸಬೇಕು. ಯಾರು ಈ ಆಕ್ಷೇಪ ಮಾಡದಂತಿರಬೇಕು. ಇಸ್ಲಾಮಿನ ಶಿಕ್ಷಣ ಹೀಗಿದೆ. ಹಾಗಿದೆ ಎಂದು, ಅದರಲ್ಲಿ ಉಗ್ರವಾದವಿದೆ ಎಂದು, ಬದಲಾಗಿ ಜನರು ಹೇಳಬೇಕು. ಇಸ್ಲಾಮಿನ ಶಿಕ್ಷಣವು ಉತ್ತಮ ಶಿಕ್ಷಣವಾಗಿದೆ. ಆದರೆ ಅದನ್ನು ಕೆಲ ಕಿಡಿಗೇಡಿ ಮುಸಲ್ಮಾನರು ಕೆಡಿಸಿದ್ದಾರೆ. ಆದರೆ ಅದರ ನಿಜವಾದ ಚಿತ್ರ ಸಹ ನಾವು ಅಹ್ಮದಿ ಮುಸಲ್ಮಾನರ ಮೂಲಕ ನೋಡಬಹುದಾಗಿದೆ. ಆದುದರಿಂದ ಅದಕ್ಕಿಂತ ಹೆಚ್ಚು ಸ್ಪಷ್ಟಪಡಿಸಬೇಕು.

ಹುಝೂರ್ ಹೇಳಿದರು. ಅಹ್ಮದಿಯುರಾದ ನಿಮಗೆ ನಾನು ಹೇಳುವುದೇನೆಂದರೆ. ಇಸ್ಲಾಮಿನ ಸುಂದರವಾದ ಶಿಕ್ಷಣವನ್ನು ಮೊದಲಿಗಿಂತ ಹೆಚ್ಚು ಪ್ರಚಾರಪಡಿಸುವ ರಾಯಭಾರಿಯಾಗಬೇಕು. ಮೊದಲಿಗಿಂತ ಅದರ ಹಕ್ಕುಗಳನ್ನು ಪಾಲಿಸಬೇಕು. ಅದಕ್ಕಾಗಿ ಪರಸ್ಪರ ಪ್ರೀತಿ ಸ್ನೇಹದಲ್ಲಿ ಮುಂದುವರೆಯಬೇಕು. ಏಕೆಂದರೆ ಪರಸ್ಪರ ಪ್ರೀತಿ, ಸ್ನೇಹ ತೋರದವರಿಗೆ ಮಸೀದಿಯ ಹಕ್ಕನ್ನು ಪಾಲಿಸಲಾಗದು. ಆರಾಧನೆಗಾಗಿ ಬರುವವರಾದರೆ, ಒಂದೇ ಪಂಕ್ತಿಯಲ್ಲಿ ನಿಲ್ಲುತ್ತೀರಿ. ವೈಮನಸ್ಸು ದೂರ ಮಾಡುತ್ತೀರಿ. ಸಲಾಮ್ ನಿರ್ವಹಿಸುವಾಗ ಎಡ, ಬಲ, ಹಿಂದೆ, ಮುಂದೆ ಇರುವವರ ಹಕ್ಕುಗಳನ್ನು ಅದರಲ್ಲಿ ಶಾಮೀಲಾಗಿರಿಸಿ ಕೊಳ್ಳಬೇಕು. ಕೇವಲ ನಾಲಿಗೆಯಿಂದ ದುಆ ಮಾಡುವವರಾದರೆ, ನಾಲಿಗೆಯಿಂದ ಅಸ್ಸಲಾಮು ಅಲೈಕುಮ್ ಹೇಳಿ ಹೃದಯಗಳಲ್ಲಿ ವೈಮನಸ್ಸು ಮತ್ತು ಹಗೆತನ ಹಾಗೂ ಸಂಶಯಗಳು ಇದ್ದರೆ ನೀವು ಆರಾಧನೆಯ ಹಕ್ಕುಗಳನ್ನು ಪಾಲಿಸಿದಂತಿರುವುದಿಲ್ಲ. ನೀವು ನಮಾಝಿನ ಹಕ್ಕು ಪಾಲಿಸಿದಂತಾಗುವುದಿಲ್ಲ. ಇಂತಹ ಜನರ ಬಗ್ಗೆ ನಾನು ಮೊದಲೇ ಹೇಳಿದಂತೆ ಅಲ್ಲಾಹನು ಹೇಳುತ್ತಾನೆ: ಇಂತಹ ಜನರ ನಮಾಝುಗಳನ್ನು ಅವರ ಮುಖದ ಮೇಲೆ ಎಸೆಯಲಾಗುವುದು ಎಂಬ ಗುಂಪಿನಲ್ಲಿ ಮುಂದುವರೆಯಬೇಕು. ಮತ್ತು ಇತರರೊಡನೆಯೂ ಮೊದಲಿಗಿಂತ ಹೆಚ್ಚು ಸಂಪರ್ಕಗಳನ್ನು ದೃಢಗೊಳಿಸಬೇಕು. ಆ ಸಂಬಂಧಗಳಲ್ಲಿ ಮುಂದುವರೆಯಬೇಕು ಮತ್ತು ಲೋಕಕ್ಕೆ ತೋರಿಸಬೇಕು. ಇದು ಇಸ್ಲಾಮಿನ ನೈಜ ಶಿಕ್ಷಣವಾಗಿದೆ.

ಅಲ್ಲಾಹನು ನಿಮಗೆ ಮಸೀದಿಯ ಹಕ್ಕುಗಳನ್ನು ಪಾಲಿಸುವ ಭಾಗ್ಯ ದಯಪಾಲಿಸಲಿ. ಎಲ್ಲಿ ಆರಾಧನೆಯ ಹಕ್ಕುಗಳು ಪಾಲಿಸುವರೋ ಅಲ್ಲಿ ಆರಾಧನೆಯ ನಿಜ ಅರ್ಥದಲ್ಲಿ ಹಕ್ಕುಗಳನ್ನು ಪಾಲಿಸುವಂತಾಗಲಿ. ಅಂತೆಯೇ ಜನರ ಹಕ್ಕುಗಳನ್ನು ಪಾಲಿಸುವವರಾಗಲಿ.

ಅದೇ ರೀತಿ ನಾನು ಇಲ್ಲಿ ಆಗಮಿಸಿ ನಮ್ಮ ಸಮಾರಂಭವನ್ನು ಯಶಸ್ವಿಗೊಳಿಸಿದ ಎಲ್ಲ ಆಧರಣೀಯ ಅತಿಥಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಧನ್ಯವಾದಗಳು.

ಹುಝೂರರ ಈ ಸಂಬೋಧನೆ 8 ಗಂಟೆ 25 ನಿಮಿಷದವರೆಗೆ ಜಾರಿಯಲ್ಲಿತ್ತು. ಅಂತಿಮವಾಗಿ ಹುಝೂರ್ ದುಆ ಮಾಡಿಸಿದರು.

ಅನಂತರ ಈ ಸಮಾರಂಭದಲ್ಲಿ ಭಾಗವಹಿಸಿದ ಎಲ್ಲ ಅತಿಥಿಗಳು ಹುಝೂರರ ಜೊತೆಯಲ್ಲಿ ಊಟ ಮಾಡಿದರು.

ಇಂದಿನ ಈ ಸಮಾರಂಭದಲ್ಲಿ 210 ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ರಾಜ್ಯ ಸಭಾ ಸದಸ್ಯರು Schultheis Karl, ಲಾರ್ಡ್ ಮೇಯರ್ Aaachen Marcel Phillipp,, ಪಾರ್ಲಿಮೆಂಟ್ ಸದಸ್ಯರು Jansen Danela, member of City Parliment Kuchelkorn Manfret ನಗರ ಸಂಸತ್ ಸದಸ್ಯರು Dopatra Mathias, Wurselen ನಗರ ಸಂಸತ್ ಸದಸ್ಯರು Jansen Bjorn ನಗರದ ಮೇಯರ್ KELLER ARNO ಮತ್ತು ಅವರುಗಳಲ್ಲದೆ ವಿವಿಧ ಸರ್ಕಾರಿ ಕಚೇರಿಗಳ ಅಧಿಕಾರಿಗಳು, ವಕೀಲರು, ವೈದ್ಯರು, ಇಂಜಿನಿಯರರು, ಅಧ್ಯಾಪಕರು ಮತ್ತು ಜೀವನಕ್ಕೆ ಸಂಬಂಧಿಸಿದ ವಿವಿಧ ವಿಭಾಗಗಳಿಂದ ಸಂಬಂಧಪಟ್ಟ ಜನರು ಭಾಗವಹಿಸಿದ್ದರು.

ಸಮಾರಂಭದ ಕೊನೆಯಲ್ಲಿ ಕೆಲ ಅತಿಥಿಗಳು ಹುಝೂರರೊಡನೆ ಹಸ್ತಲಾಘವ ಮಾಡುವ ಭಾಗ್ಯ ಪಡೆದರು. ಹುಝೂರ್ ಅತಿಥಿಗಳೊಡನೆ ಮಾತನಾಡಿದರು. ಹುಝೂರ್ ಮಾರ್ಕಿನಿಂದ ಹೊರಗೆ ಬರುತ್ತಿದ್ದಾಗ ಒಬ್ಬ ವಯಸ್ಕರು ಹುಝೂರರೊಡನೆ ಭೇಟಿಯಾಗ ಬಯಸಿದರು. ಹುಝೂರ್ ಆತ್ಮೀಯವಾಗಿ ಅವರ ಬಳಿ ನಿಂತರು. ಮತ್ತು ಹಸ್ತಲಾಘವ ನೀಡಿದರು ಮತ್ತು ಅವರ ಆರೋಗ್ಯ ವಿಚಾರಿಸಿದರು. ಆ ಭಾಗ್ಯವಂತ ವ್ಯಕ್ತಿಯ ಹೆಸರು ಚೌಧರಿ ಇನಾಯತುಲ್ಲಾಹ್ ಆಗಿದೆ. ಅವರ ವಯಸ್ಸು 100 ವರ್ಷವಾಗಿದೆ. ಪಾಕಿಸ್ತಾನದ ಭಲ್‌ವಾಲ್ ಜಿಲ್ಲೆಯ ಸರ್‌ಗೋಧದವರಾಗಿದ್ದರು.

ಅನಂತರ ಹುಝೂರ್ ಕೆಲ ಸಮಯಕ್ಕಾಗಿ ಲಜ್ನಗಳ ಮಾರ್ಕಿನಲ್ಲಿ ಆಗಮಿಸಿದರು. ಅಲ್ಲಿ ಮಹಿಳೆಯರೂ ದರ್ಶನ ಭಾಗ್ಯ ಪಡೆದರು. ಬಾಲಕಿಯರು ಪ್ರಾರ್ಥನಾ ಕವಿತೆಗಳನ್ನು, ಗೀತೆಗಳನ್ನು ಪ್ರಸ್ತುತಪಡಿಸಿದರು. ಹುಝೂರ್(ಅಬಅ) ಪ್ರೀತಿಯಿಂದ ಬಾಲಕಿಯರಿಗೆ ಚಾಕ್ಲೇಟ್ ನೀಡಿದರು.

ಅನಂತರ ಹುಝೂರ್(ಅಬಅ) ಮಸೀದಿಯ ಪ್ರಾಂಗಣಕ್ಕೆ ಆಗಮಿಸಿದರು. ಅಲ್ಲಿ ಕಾರ್ಯಕ್ರಮದನ್ವಯ ಸ್ಥಳೀಯ ಮಜ್ಲಿಸ್ ಆಮಿಲ ಹಾಗೂ ಇತರ ಜಮಾಅತಿನ ಪದಾಧಿಕಾರಿಗಳು ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಆ ನಡುವೆ ಬಾಲಕರು ಮಸೀದಿಯ ಹೊರಭಾಗದ ಒಂದು ಸಾಲಿನಲ್ಲಿ ನಿಂತುಕೊಂಡಿದ್ದರು. ಹುಝೂರ್ ಪ್ರೀತಿಪೂರ್ವಕವಾಗಿ ಅವೆಲ್ಲ ಮಕ್ಕಳಿಗೆ ಚಾಕ್ಲೆಟ್ ನಿಡಿದರು.

ಹುಝೂರ್(ಅಬಅ) ಕೆಲ ಸಮಯ ಮಸೀದಿಯ ಹೊರಾಂಗಣದಲ್ಲಿ ಜಮಾಅತ್ ಬಾಂಧವರೊಂದಿಗೆ ಕಾಲ ಕಳೆದರು ಆ ನಡುವೆ ಕೆಲ ಅತಿಥಿಗಳು ಹುಝೂರ್(ಅಬಅ) ರವರನ್ನು ಭೇಟಿಯಾಗಿ ಹಸ್ತಲಾಘವ ಪಡೆದರು.

ಇಂದಿನ ಈ ಸಮಾರಂಭದಲ್ಲಿ ಹಲವು ಅತಿಥಿಗಳು ತಮ್ಮ ಅನಿಸಿಕೆಗಳನ್ನು ತಿಳಿಸಿರುತ್ತಾರೆ. ಹುಝೂರರ ಸಂಬೋಧನೆ ಅತಿಥಿಗಳ ಮೇಲೆ ಅಚ್ಚಳಿಯದ ಪ್ರಭಾವ ಬೀರಿದೆ. ಅದನ್ನು ಬಹಿರಂಗಪಡಿಸದೆ ಇರಲಾಗಲಿಲ್ಲ.

ಮಸೀದಿಯ ಮುಂದೆ ಇರುವ Kinder Garden ನ ಓರ್ವ ಶಿಕ್ಷಕಿ Anett Bolle ಈ ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದರು. ಹುಝೂರರ ಸಂಬೋಧನೆಯಿಂದ ಪ್ರಭಾವಿತಗೊಂಡು ಹೇಳಿದರು. ಇಂದು ಎಲ್ಲರಿಗಿಂತ ಹೆಚ್ಚು ಹುಝೂರರ ವ್ಯಕ್ತಿತ್ವ ನನ್ನನ್ನು ಪ್ರಭಾವಿತನನ್ನಾಗಿ ಮಾಡಿದೆ. ಹುಝೂರರ ನಯನಗಳಿಂದ ಆತ್ಮೀಯತೆ ಗೋಚರವಾಗುತ್ತದೆ. ಖಲೀಫತುಲ್ ಮಸೀಹ್ ಇಂದು ತುಂಬ ವಿನಯದಿಂದ ಮತ್ತು ಲಘು ಸ್ವರದಲ್ಲಿ ಮಾತನಾಡಿದರಾದರೂ ಅವರಲ್ಲಿ ಪ್ರತಾಪ ಕಾಣುತಿತ್ತು. ಖಲೀಫರ ಇವೆಲ್ಲ ಮಾತುಗಳು ನಮ್ಮ ಹೃದಯಗಳಲ್ಲಿ ಇಳಿದಿವೆ. ಅದರಿಂದ ಪ್ರತಿ ಹೃದಯದಲ್ಲಿ ಅವರ ಗೌರವ

ಸ್ಥಾಪನೆಗೊಂಡಿದೆ. ನಾನು ಹೇಳಬಯಸುವುದೇನೆಂದರೆ ಖಲೀಫತುಲ್ ಮಸೀಹ್ ಮಾನವೀಯತೆಗೆ ವಿಶೇಷ ಪಾರಿತೋಷಕವಾಗಿದ್ದಾರೆ. ನನ್ನ ಜೀವನದಲ್ಲಿ ಇಂದು ಖಲೀಫತುಲ್ ಮಸೀಹ್ ವಿಶೇಷ ಪ್ರಭಾವ ಬೀರಿದ್ದಾರೆ.

ಆ ಶಿಕ್ಷಕಿಯ ಪತಿ Fritz Bolle ಸಹ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಅವರು ಹೇಳಿದರು. ಖಲೀಫತುಲ್ ಮಸೀಹ್ ಅವರಿಂದ ಶಾಂತಿ ಪಸರಿಸುವುದು ಅದ್ಭುತವಾದ ವಿಷಯವಾಗಿದೆ. ಆ ಶಾಂತಿಯೇ ಇಂದು ಲೋಕಕ್ಕೆ ಬೇಕಾಗುತ್ತದೆ ಎಂದು ನನ್ನ ಭಾವನೆಯಾಗಿದೆ.

ಮನೋವಿಜ್ಞಾನ ತಜ್ಞೆ ಮಹಿಳೆಯಾದ ಇನ್‌ಕರ್ಝುಂಡರ್ ಸಾಹಿಬಾ ತಮ್ಮ ಭಾವನೆಗಳನ್ನು ಹೀಗೆ ಹೇಳಿದರು. ನಾನು ಖಲೀಫತುಲ್ ಮಸೀಹ್‌ರ ಸಂಬೋಧನೆಯಿಂದ ತುಂಬಾ ಪ್ರಭಾವಿತನಾಗಿದ್ದೇನೆ. ವಿಶೇಷವಾಗಿ ಇಂದು ಅವರು ನೀಡಿದ ಶಾಂತಿ ಸಂದೇಶ. ಹುಝೂರ್ ಹೂವು ಮಾರುವವನ ಉದಾಹರಣೆ ಕೊಟ್ಟು ಇಸ್ಲಾಮಿ ಶಿಕ್ಷಣಕ್ಕೆ ಹೂವಿನಿಂದ ಹೋಲಿಸಿದ ರೀತಿ ನನ್ನನ್ನು ತುಂಬ ಪ್ರಭಾವಿತನನ್ನಾಗಿ ಮಾಡಿದೆ. ಇದೀಗ ಈ ಸದಾ ಶಾಶ್ವತವಾದ ಹೂವು, ಪರಿಮಳ ಬೀರುವ ಹೂವು ಸದಾ ನಮ್ಮ ಜೊತೆಯಿರುತ್ತದೆ.

Aachen ನಲ್ಲಿರುವವರು ಒಬ್ಬ ಮಿತ್ರರು BONGER ಸಾಹಿಬ್ ಸಹ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಹೇಳಿದರು. ಎರಡು ಮೂರು ವರ್ಷಗಳ ಹಿಂದೆ ನಾನು ಯೂರೋಪಿಯನ್ ಪಾರ್ಲಿಮೆಂಟಿನಲ್ಲಿಯೂ ಖಲೀಫತುಲ್ ಮಸೀಹ್ ಅವರ ಭಾಷಣ ಕೇಳಿದ್ದೆ. ವಾಸ್ತವವಾಗಿ ನಾನು ಇಂದು ಬಂದ ಉದ್ದೇಶ ನನಗೆ ನೋಡಬೇಕಾಗಿತ್ತು. ಖಲೀಫರು ಕೇವಲ ಗಣ್ಯವ್ಯಕ್ತಿಗಳಲ್ಲಿ, ದೊಡ್ಡ ವೇದಿಕೆಗಳಲ್ಲಿ ಶಾಂತಿಯ ಮಾತುಗಳನ್ನು ಆಡುತ್ತಾರೋ ಅಥವಾ ಇತರ ಸಣ್ಣ ಪುಟ್ಟ ಸಮಾರಂಭಗಳಲ್ಲಿಯೂ, ಸಾಮಾನ್ಯ ಜನರಲ್ಲಿಯೂ ಶಾಂತಿಯ ಮಾತನಾಡುತ್ತಾರೋ ಎಂದು. ಆದುದರಿಂದ ಇಂದು ನಾನು ಖಲೀಫರ ಭಾಷಣ ಕೇಳಿದ್ದೆ. ಅವರು ಯೂರೋಪಿಯನ್ ಪಾರ್ಲಿಮೆಂಟ್‌ನಲ್ಲಿ ನೀಡಿರುವಂತಹ ಶಿಕ್ಷಣವೇ ಇಲ್ಲಿ ನೀಡಿರುತ್ತಾರೆ. ಅವರು ಎಲ್ಲರಿಗೂ ಒಬ್ಬರು ಇನ್ನೊಬ್ಬರ ಜೊತೆ ಪ್ರೀತಿಯಿಂದ, ಸಮಾನತೆಯಿಂದ, ಸಹಿಷ್ಣುತೆಯಿಂದ, ಧೈರ್ಯದಿಂದ ಮತ್ತು ಸೌಜನ್ಯದಿಂದ ವರ್ತಿಸಲು ಉಪದೇಶ ನೀಡಿದರು. ಇವೆಲ್ಲ ಮಾತುಗಳು ನನಗೆ ತುಂಬ ಪ್ರಭಾವಿತಗೊಳಿಸಿದೆ.

ರಾಜ್ಯ ಸಂಸತ್‌ನ ಸದಸ್ಯರು karl schultheis ಹೇಳಿದರು. ಇಂದಿನ ಸಮಾರಂಭದ ಆಯೋಜನೆ ತುಂಬ ಒಳ್ಳೆಯದಾಗಿತ್ತು. ನಿಮ್ಮ ಖಲೀಫರು ಸ್ವಯಂ ನಿಜವಾದ ಮಾದರಿಯಾಗಿರುತ್ತಾರೆ ಮತ್ತು ವಾಸ್ತವರೂಪದಲ್ಲಿ ಶಾಂತಿಯ ದೂತರಾಗಿದ್ದಾರೆ.

ರಾಜ್ಯ ಸಂಸತ್‌ನ ಸದಸ್ಯರಾದ Daniela Jansen ಸಾಹಿಬಾ ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ಖಲಿಫತುಲ್ ಮಸೀಹ್ ಅವರ ಸಂದೇಶವು ಇತರರಿಗೂ ತಲುಪಿಸಬೇಕಾಗಿದೆ. ಇಂದು ಖಲೀಫತುಲ್ ಮಸೀಹ್ ಅವರ ಭಾಷಣ ನಮಗೆ ಇಸ್ಲಾಮಿನ ನಿಜವಾದ ಶಿಕ್ಷಣವನ್ನು ಪರಿಚಯಿಸಿಕೊಟ್ಟಿದೆ.

ಮಸೀದಿಗೆ ಸಂಬಂಧಿಸಿದ ಸಭಾಂಗಣಗಳ ಮಾಲೀಕರು Mr. Schneider ತಮ್ಮ ಕುಟುಂಬ ಸಮೇತ ಆಗಮಿಸಿದ್ದರು.

ಹುಝೂರರ ಸಂಬೋಧನೆ ಕೇಳಿ ಹೇಳಿದರು. ಖಲೀಫತುಲ್ ಮಸೀಹ್‌ರು ಇಂದು ಹೇಳಿರುವ ಮಾತುಗಳು ನನ್ನನ್ನು ತುಂಬ ಪ್ರಭಾವಿತಗೊಳಿಸಿದೆ. ನಾವು ತುಂಬಾ ಪ್ರಾಮುಖ್ಯತೆ ಹೊಂದಿತ್ತು. ನಾವಂತೂ ಖಲೀಫತುಲ್ ಮಸೀಹ್‌ರ ಪದಗಳು ಇನ್ನೂ ಹಲವು ಗಂಟೆಯವರೆಗೆ ಕೇಳಬಹುದಾಗಿದೆ ಮತ್ತು ಕೇಳಬಯಸುತ್ತೇನೆ.

ಒಬ್ಬ ಜರ್ಮನ್ ಹೇಳಿದನು. ಇಂದು ಖಲೀಫತುಲ್ ಮಸೀಹ್ ಹೇಳಿರುವಂತಹ ಮಾತುಗಳ ಪ್ರಕಾರ ಕೇವಲ ಅಹ್ಮದಿ ಮುಸ್ಲಿಮರಷ್ಟೆ ಅಲ್ಲ ಲೋಕದ ಇತರ ಜನರು ನಡೆದುಕೊಂಡರೆ ಲೋಕದಲ್ಲಿ ಅದ್ಭುತವಾದ ಶಾಂತಿ ಕಾಣಬಹುದಾಗಿದೆ. ಈ ಶಿಕ್ಷಣವನ್ನು ಸ್ವೀಕರಿಸಲು ಕ್ರೈಸ್ತ ಅಥವಾ ಮುಸ್ಲಮಾನನೆ ಆಗಬೇಕಿಲ್ಲ. ಬದಲು ಬುದ್ಧಿವಂತ ಪ್ರತಿಯೊಬ್ಬ ವ್ಯಕ್ತಿಗೆ ಈ ಶಿಕ್ಷಣ ಸ್ವೀಕರಿಸಲು ಅರ್ಹವಾಗಿದೆ.

ಯುಕೆರೇನ್ ದೇಶದ ಒಂದು ಕುಟುಂಬ ತಮ್ಮ ಅನಿಸಿಕೆಗಳನ್ನು ಹೀಗೆ ಹೇಳಿದರು. ನಾವು ಭಾವಿಸಿದ್ದು ಒಬ್ಬ ಧಾರ್ಮಿಕ ಮುಖಂಡರಾದ ಕಾರಣ ಖಲೀಫತುಲ್ ಮಸೀಹ್ ಕಠಿಣವಾದ ಭಾಷೆ ಉಪಯೋಗಿಸುವರು. ತಜ್ಞರ ರೀತಿಯಲ್ಲಿ ಮಾತನಾಡುವವರು ಎಂದು ಆದರೆ ಖಲೀಫತುಲ್ ಮಸೀಹ್ ಯಾವುದೇ ಕಠಿಣ ಪದಗಳು ಬಳಸಲಿಲ್ಲ. ಬದಲು ಸರಳ ಭಾಷೆಯಲ್ಲಿ ಕಾರ್ಯರೂಪಕ್ಕೆ ತರುವಂತಹ ಮಾತುಗಳ ಮೇಲೆ ಒತ್ತು ಕೊಟ್ಟರು. ತಮ್ಮ ಭಾಷಣದಲ್ಲಿ ಲೌಕಿಕ ಕಾರ್ಯಗಳು ನುಡಿಗಟ್ಟುಗಳು ಮತ್ತು ತತ್ವಜ್ಞಾನ ಬಳಸಲಿಲ್ಲ.

ವಿಶ್ವವಿದ್ಯಾನಿಲಯದ ಒರ್ವ ಪ್ರೋಫೆಸರ್ Anthony Rights ಸಾಹಿಬ್ ಹೇಳಿದರು. ಖಲೀಫತುಲ್ ಮಸೀಹ್ ಯಾವ ರೀತಿ ಯಾವ ಸಂದರ್ಭ ಹೇಗೆ ಮಾತನಾಡಬೇಕೆಂಬುದು ಅರಿತವರಾಗಿದ್ದಾರೆ. ಅದು ನನಗೆ ತುಂಬ ಮೆಚ್ಚುಗೆಯಾಯಿತು. ತಯಾರಿ ನಡೆಸಿ ಯಾರಾದರೂ ಭಾಷಣ ಮಾಡಬಹುದು. ಆದರೆ ಅಷ್ಟೊಂದು ಜ್ಞಾನ ಭಂಡಾರವಿದ್ದು ಸಂದರ್ಭೋಚಿತವಾಗಿ ಮಾತನಾಡುವುದು, ಸಭಿಕರಿಗೆ ರುಚಿಸುವಂತೆ ಮಾತನಾಡುವುದು ತುಂಬ ಕಡಿಮೆ. ಖಲೀಫತುಲ್ ಮಸೀಹ್‌ಹರ ರೀತಿಯ ಸಂಬೋಧನೆ, ಭಾಷಣಗಳು ಇರಬೇಕಾಗಿದೆ. ಇದೀಗ ನಿಮ್ಮ ಮಸೀದಿ ಕೇವಲ ಇಲ್ಲಿ ಅಷ್ಟೇ ಅಲ್ಲ ಬದಲು ಇನ್ನು ಹೆಚ್ಚಿನ ಕಡೆ ನಿರ್ಮಿಸುವುದು ಅನಿವಾರ್ಯವಾಗಿದೆ.

SPD ಪಕ್ಷದ ಸದಸ್ಯರು Mathas Dopatka ಸಾಹಿಬ್ ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ನನಗೆ ಖಲಿಫತುಲ್ ತುಂಬ ಮೆಚ್ಚುಗೆಯಾದರು. ಯಾವ ರೀತಿ ಮನುಷ್ಯನು ಹೂವಿನ ಸುಗಂಧ ಮೂಸಿ ಸಂತೋಷಪಡುತ್ತಾನೋ ಅದೇ ರೀತಿ ಅಹ್ಮದಿಯಾ ಜಮಾಅತ್ ಶಾಂತಿಯ ಶಿಕ್ಷಣ ಪ್ರಚಾರಗೊಳಿಸಿ ಅಪರಿಮಿತ ಸುಗಂಧ ಹಾಗೂ ಸಂತೋಷ ಪ್ರಚಾರ ಮಾಡಬಯಸುತ್ತದೆ. ನಾನು ಭಾವಿಸುವುದು ಈ ಹೋಲಿಕೆ ಭಾಷಣದ ಮುಂಚೆ ಊಹಿಸಲು ಇರಲಿಲ್ಲ. ಆದರೆ ಖಲೀಫತುಲ್ ಮಸೀಹ್ ಹೇಳಿದ ರೀತಿ ಅಚ್ಚುಮೆಚ್ಚಾಯಿತು.

ಮಸೀದಿ ಕ್ಷೇತ್ರದ ಪೋಲೀಸ್ Incharge ಸಾಹಿಬ್ ಹೇಳಿದರು. ಖಲೀಫರು ಕೇವಲ ನಮ್ಮ ಅತಿಥಿ ವೃಂದವನ್ನು ಮಾತ್ರ ಸಂಬೋಧಿಸದೇ ಎಲ್ಲ ಉಪಸ್ಥಿತ ಅಹ್ಮದಿ ಬಾಂಧವರನ್ನೂ ಸಂಬೋಧಿಸಿ ಮಾತನಾಡಿದ ರೀತಿ ತುಂಬ ಮೆಚ್ಚುಗೆಯಾಯಿತು. ಖಲೀಫತುಲ್ ಮಸೀಹ್ ಉಪದೇಶಿಸಿದರು. ಶಾಂತಿ ಸ್ಥಾಪಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ ಮತ್ತು ಪರಸ್ಪರ ಪ್ರೀತಿಯಿಂದ ಬಾಳಬೇಕು. ಪ್ರೀತಿಯಿಂದ ವರ್ತಿಸಬೇಕು. ಅದರಿಂದ ಶಾಂತಿ ಸ್ಥಾಪನೆ ಸಾಧ್ಯವಾಗುವುದು, ಅಲ್ಲಾಹನು ಎಲ್ಲರನ್ನೂ ಪ್ರೀತಿಸುತ್ತಾನೆ ಮತ್ತು ಪ್ರತಿಯೊಬ್ಬನು ಅವನ ಪ್ರೀತಿ ಪಡೆಯಬಹುದಾಗಿದೆ. ಬೇಕಾದರೆ ಅವನನ್ನು ದೇವರು ಅಂತಲೂ ಕರೆಯಿರಿ, ಅಥವಾ ಅಲ್ಲಾಹನೆಂದು ಕರೆಯಿರಿ ಅಥವಾ ರಬ್ ಎನ್ನಿರಿ ಆ ಕಾರಣದಿಂದ ಪ್ರೀತಿಯಿಂದ ವರ್ತಿಸಬೇಕಾಗಿದೆ. ಖಲೀಫರು ಮನುಷ್ಯನನ್ನು ಕಪಟವಿಶ್ವಾಸದಿಂದ ದೂರವಿರಬೇಕು ಎಂಬ ಮಾತು ತುಂಬಾ ಚೆನ್ನಾಗಿತ್ತು. ಅಂದರೆ ಮನುಸ್ಯನು ನಿಸ್ಸಂದೇಹವಾಗಿ ಮಸೀದಿಗೆ ಹೋಗಿ ಬಂದು ಸಜ್ಜನ ಎನಿಸಿಕೊಳ್ಳಬಹುದು. ಆದರೆ ಹೃದಯದಲ್ಲಿ ವಿಶ್ವಾಸವಿಲ್ಲದಿದ್ದರೆ ಯಾವ ಪ್ರಯೋಜನವೂ ಇಲ್ಲ. ಖಲೀಫರ ಇವೆಲ್ಲ ಮಾತುಗಳು ತುಂಬ ಪ್ರಭಾವ ಬೀರುವಂತಹದ್ದಾಗಿದ್ದವು. ಇಂದು ನನಗೆ ಖಲೀಫತುಲ್ ಮಸೀಹ್‌ರನ್ನು ನೋಡುವ ಸಂದರ್ಭ ಒದಗಿ ಬಂದುದಕ್ಕೆ ತುಂಬ ಹೆಮ್ಮೆಪಡುವಂತಾಗಿದೆ. ನನ್ನ ಭಾವನೆಯಲ್ಲಿ ಕೆಥೋಲಿಕ್ಸ್‌ಗಳಲ್ಲಿ ಪೋಪರಿಗೆ ಇರುವ ಸ್ಥಾನ ಖಲೀಫರದ್ದಾಗಿದೆ.

WURSELEN ನಗರದ ಮೇಯರ್ AANO KELLER ಹೇಳಿದರು. ಖಲೀಫತುಲ್ ಮಸೀಹ್ ಅವರ ಸಂಬೋಧನೆಯು ನಮ್ಮನ್ನು ತುಂಬ ಪ್ರಭಾವಿತನನ್ನಾಗಿಸಿದೆ. ನನಗೆ ಒಂದು ಮಾತು ಅತ್ಯಂತ ಮೆಚ್ಚುಗೆ ಆದದ್ದು, ಅಲ್ಲಾಹನ ಆರಾಧನೆ ಮಾಡುವ ಮನುಷ್ಯನು ಅದರ ನಿಜವಾದ ಲಾಭ ಪಡೆಯುವುದು. ಅವನು ಮನುಷ್ಯನೊಡನೆ ಸಹಕಾರದೊಂದಿಗೆ ಇದ್ದಾಗ ಮತ್ತು ಮನುಷ್ಯರ ಹಕ್ಕುಗಳನ್ನು ಪಾಲಿಸಿದಾಗ ಮಾತ್ರ ಎಂದದ್ದು. ನನ್ನ ದೃಷ್ಟಿಯಲ್ಲಿ ಇದು ಮುಖ್ಯ (main) ಸಂದೇಶವಾಗಿದೆ. ಅದನ್ನು ಇಂದು ಖಲೀಫತುಲ್ ಮಸೀಹ್ ನಮಗೆ ನೀಡಿರುತ್ತಾನೆ. ನಾನು ನಿಮಗೆ ಸತ್ಯವಾಗಿ ಹೇಳುವೆನು. ಈ ಭಾವನೆ ಈ ನಡತೆ ಮಾನವನು ಹೊಂದಿದರೆ ಇಂದು ಲೋಕ ಬದಲಾಗಬಹುದಾಗಿದೆ.

AACHEN ನಗರದ Integration ಸಂಸ್ಥೆಯ ಪ್ರತಿನಿಧಿ ಹೇಳಿದರು. ನಾನು ಖಲೀಫತುಲ್ ಮಸೀಹ್‌ರ ಸಂದೇಶವನ್ನು ಸಂಪೂರ್ಣವಾಗಿ ಬೆಂಬಲಿಸಿದವನಾಗಿದ್ದೇನೆ. ವಿಶೇಷವಾಗಿ ನಮಗೆ ಸಹಿಷ್ಣುತೆಯಿಂದ ವರ್ತಿಸಬೇಕಾಗಿದೆ. Integration ಗೋಸ್ಕರ ಸಹಿಷ್ಣುತೆಯ ಅಗತ್ಯವಿದೆ. ಹುಝೂರರು ಹೂವಿನೊಂದಿಗೆ ನೀಡಿದ ಉಪಮೆ ತುಂಬ ಮೆಚ್ಚುಗೆಯಾಯಿತು. ಹಲವು ಅಹ್ಮದಿಯರ ಮೇಲೆ ಈ ಮಾತು ಸಾಕ್ಷ್ಯವಾಗಿಸುತ್ತದೆ. ಹೂವಿನ ಅಂಗಡಿದಾರರಾದ ತಾರೀಕ್ ಒಬ್ಬರೇ ಅಲ್ಲ. ಬದಲು Aachen ನಲ್ಲಿ ಹಲವು ಯುವಕರಿದ್ದಾರೆ. ಉದಾಹರಣೆಗೆ ಜನವರಿ ಒಂದರಂದು ಸ್ವಚ್ಛತಾ ಕಾರ್ಯ ನಿರ್ವಹಿಸುವವರು, ಸಸಿಯನ್ನು ನೆಡುವವರು ಇತ್ಯಾದಿ.

ಒಬ್ಬ Architect ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ನನಗೆ ಇದಕ್ಕಿಂತ ಮುಂಚೆ ಜಮಾಅತಿನ ಕುರಿತು ಯಾವ ಪರಿಚಯವು ಇರಲಿಲ್ಲ. ಹುಝೂರರ ಸಂಬೋಧನೆಯು ಮನದ ಮೇಲೆ ತುಂಬ ಪ್ರಭಾವ ಬೀರಿದೆ. ಹುಝೂರರ ವರ್ಣನೆ ರೀತಿ ಹಾಗೂ ವಿಧಾನ ಪ್ರಶಂಸನೀಯವಾಗಿದೆ. ನನಗೆ ಈ ಮಾತು ತುಂಬ ಮೆಚ್ಚುಗೆಯಾಯಿತು. ಹೃದಯಗಳು ವೈಮನಸ್ಸುಗಳಿಂದ ದುರಾಲೋಚನೆಯಿಂದ ಮುಕ್ತರಾಗದಿದ್ದರೆ ಕೇವಲ ಮಸೀದಿಗೆ ಬಂದು ಆರಾಧನೆ ಮಾಡುವುದರಿಂದ ಯಾವ ಪ್ರಯೋಜನವು ಇಲ್ಲ. ಅವರ ಈ ಉಪದೇಶವು ಮೆಚ್ಚುಗೆಯಾಯಿತು. ಎಲ್ಲ ರೀತಿಯ ನೆರೆಹೊರೆಯವರ ಹಕ್ಕುಗಳ ಬಗ್ಗೆ ಚಿಂತಿಸಬೇಕು. ಮತ್ತು ಅವರ ಹಕ್ಕು ಪಾಲನೆ ಆರಾಧನೆಗೋಸ್ಕರ ಅನಿವಾರ್ಯವಾಗಿದೆ

ಎಂಬುದು.

ಒಬ್ಬ ಪೋಲಿಸ್ ಇನ್ಸ್‌ಪೆಕ್ಟರ್ ಹೇಳಿದರು. ಇದೊಂದು ತುಂಬ ಒಳ್ಳೆಯ ಕಾರ್ಯಕ್ರಮವಾಗಿತ್ತು. ಅದನ್ನು ನಾನು ಸದಾ ಒಳ್ಳೆಯ ಸಂದರ್ಭವಾಗಿ ನೆನಪಿಡುವೆನು. ನಿಮ್ಮ ಖಲೀಫರು ಒಂದು ಅದ್ಭುತ ರೀತಿಯಲ್ಲಿ ಪರಿಣಾಮ ಬೀರುವ ವ್ಯಕ್ತಿಗಳಾಗಿದ್ದಾರೆ.

ಅತಿಥಿಯೋರ್ವರಾದ Mr. Alex Droste ಹೇಳಿದರು. ಪ್ರಿಯ ಅಹ್ಮದಿಯಾ ಜಮಾಅತ್‌ನವರೆ, ನೀವು ಒಂದು ಬಹಳ ಪ್ರೀತಿಯ ಜಮಾಅತ್ ಆಗಿರುವಿರಿ. ನನಗೆ ನಿಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಿ ತುಂಬ ಸಂತೋಷವಾಗಿದೆ. ನನಗೆ ನೀವ್ಯಾರು ಎಂದು ಅರಿಯುವ ತುಂಬ ಆಸಕ್ತಿಯಿತ್ತು. ನಿಮ್ಮ ಅತಿಥಿ ಸತ್ಕಾರ ತುಂಬ ಉತ್ತಮವಾಗಿತ್ತು. ಕೊನೆಯಲ್ಲಿ ನನಗೆ ಖಲೀಫತುಲ್ ಮಸೀಹ್‌ರೊಂದಿಗೆ ಹಸ್ತಲಾಘವ ಮಾಡುವ ಸಂದರ್ಭ ಒದಗಿ ಬಂದಿದೆ. ಅದು ನನಗೆ ಗೌರವದ ಮಾತಾಗಿದೆ. ಆ ಸಮಯ ನನ್ನ ಕಾಲುಗಳು ಕಂಪಿಸುತ್ತಿದ್ದವು. ನಾವು ಒಳ್ಳೆಯ ನೆರೆಹೊರೆಯರಾಗಿರುವೆವು ಎಂಬ ವಿಶ್ವಾಸ ನನಗಿದೆ. ಅಲ್ಲಾಹ್ ಮತ್ತು ಅವನ ಅನುಗ್ರಹ ನಿಮ್ಮ ಜೊತೆಗಿರಲಿ.

ಇಬ್ಬರು ಪೋಲೀಸ್‌ನವರು ತಮ್ಮ ಅನಿಸಿಕೆಗಳನ್ನು ಹೇಳಿದರು. ಹುಝೂರರ ಸಂಬೋಧನೆ ತುಂಬ ಒಳ್ಳೆಯದಾಗಿತ್ತು. ಎಲ್ಲ ಮಾತುಗಳು ನೇರವಾಗಿ ಮನಸೇರುವಂತಿತ್ತು. ಅದರಂತೆ ನಡೆದುಕೊಂಡರೆ ಲೋಕದಲ್ಲಿ ಶಾಂತಿ ಸ್ಥಾಪನೆ ಆಗುವುದರಲ್ಲಿ ಯಾವ ಸಂಶಯವು ಇರುವುದಿಲ್ಲ. ಆದರೆ ಅದಕ್ಕಾಗಿ ಎಲ್ಲರೂ ಶ್ರಮಪಡಬೇಕು. ಪ್ರತಿಯೊಬ್ಬರು ಅದರಂತೆ ನಡೆಯಬೇಕು.

ಒಬ್ಬ Real estate Agent ಹೇಳಿದರು. ಖಲೀಫತುಲ್ ಮಸೀಹ್ ನನ್ನ ಮನದಲ್ಲಿ ಇರುವುದೆಲ್ಲ. ಪ್ರಕಟ ಪಡಿಸಿದ್ದಾರೆ. ನಾನು ಖಲೀಫರು ಯೂರೋಪಿಯನ್ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣ ಕೇಳಿದ್ದೆ. ಇಂದಿನ ಭಾಷಣವನ್ನೂ ಕೇಳಿದ್ದೇನೆ. ನನಗೆ ಕಂಡು ಬಂದದ್ದು ಖಲಿಪರ ಮಾತುಗಳ ಕ್ರಿಯಾರೂಪ ನಿಮ್ಮ ಜಮಾಅತಿನಲ್ಲಿ ಕಾಣಬಹುದಾಗಿದೆ. ಖಲೀಫರ ಮಾತುಗಳನ್ನು ಲೋಕದಲ್ಲೆಲ್ಲ ಪ್ರಚಾರ ಮಾಡಿದರೆ, ಅದರ ಮೇಲೆ ಪ್ರತಿಯೊಬ್ಬರು ನಡೆದುಕೊಂಡರೆ ಲೋಕದಲ್ಲಿ ಶಾಂತಿಸ್ಥಾಪನೆಯಾಗಬಹುದಾಗಿದೆ.

ಒಟ್ಟಾರೆ ಪ್ರತಿಯೊಬ್ಬರು ತಮ್ಮದೇ ಆದ ರೀತಿಯಲ್ಲಿ ಅವರವರ ಭಾವನೆಗಳನ್ನು ಸ್ಪಷ್ಟಪಡಿಸಿದ್ದಾರೆ. ಪ್ರತಿಯೊಬ್ಬರು ಹುಝೂರರ ಸಂಬೋಧನೆಯಿಂದ ಪ್ರಭಾವಿತರಾಗಿ ಇಲ್ಲಿಂದ ಮರಳಿದರು.

"ಮಸ್ಜಿದ್ ಮನ್ಸೂರ್" Aachen ಉದ್ಘಾಟನೆಯ ನಂತರ ಇಲ್ಲಿಂದ ಫ್ರೆಂಕ್‌ಫರ್ಟ್ ಪ್ರಯಾಣಿಸಬೇಕಾಗಿತ್ತು.

ಒಂಭತ್ತು ಕಾಲುಗಂಟೆಗೆ ಇಲ್ಲಿಂದ ಫ್ರಂಕ್‌ಫರ್ಟ್ ಪ್ರಯಾಣಿಸಿದರು. Aachine ಯಿಂದ ಫ್ರಂಕ್‌ಫರ್ಟ್‌ಗೆ ಇರುವ ದೂರ 261 ಕಿ.ಮೀ ಆಗಿದೆ. ಸುಮಾರು ಒಂದು ಕಾಲು ಗಂಟೆಯ ಪ್ರಯಾಣದ ನಂತರ ಹುಝೂರ್ 11–30 ಗಂಟೆಗೆ ಜರ್ಮನಿ ಜಮಾಅತ್ತಿನ ಕೇಂದ್ರ ಸ್ಥಳವಾದ "ಬೈತುಸ್ ಸುಬೂಹ್" ಫ್ರೆಂಕ್‌ಫರ್ಟ್ ತಲುಪಿದರು. ಹುಝೂರ್(ಅಬಅ) ವಾಹನದಿಂದ ಇಳಿಯುತ್ತಲೇ ಫ್ರೆಂಕ್‌ಫರ್ಟ್ ಮತ್ತು ಜರ್ಮನಿಯ ವಿವಿಧ ನಗರಗಳ ಜಮಾಅತಿನವರು ಬಂದಿದ್ದರು. ಜಮಾಅತ್‌ನ ಪುರುಷರು, ಸ್ತ್ರೀಯರು, ಬಾಲಕ, ಬಾಲಕಿಯರು ತಮ್ಮ ಪ್ರಿಯ ಇಮಾಮರನ್ನು ಭವ್ಯ ಸ್ವಾಗತ ಕೋರಿದರು. ಬಾಲಕ ಬಾಲಕಿಯರು ಸಮವಸ್ತ್ರ ಧರಿಸಿ ವಿವಿಧ ಗುಂಪುಗಳ ರೂಪದಲ್ಲಿ ಪ್ರಾರ್ಥನಾ ಕವನಗಳು ಮತ್ತು ಸ್ವಾಗತ ಗೀತೆಗಳನ್ನು ಪ್ರಸ್ತುತಪಡಿಸಿದರು. ಸಂಸತ್‌ಭರಿತರಾಗಿ ಶ್ರದ್ಧೆಯಿಂದ ಎಲ್ಲೆಡೆಯಿಂದ ಕೈಗಳು ಎತ್ತರ ಮಾಡಿ ಬೀಸುತ್ತ ಅಹಲೌಂ ವ ಸಹತೌಂ ವ ಮರ್‌ಹಬಾ ಎಂಬ ಧ್ವನಿ ಮೊಳಗುತ್ತಿತ್ತು. ಜಮಾಅತ್ ಬಾಂಧವರು ಉತ್ಸಾಹದಿಂದ ಘೋಷಣೆ ಹಾಕುತ್ತಿದ್ದರು.

ಮುಕರ್ರಮ್ ಇದ್ರೀಸ್ ಅಹ್ಮದ್ ಸಾಹಿಬ್ ಸ್ಥಳೀಯ ಅಮೀರರು ಫ್ರೆಂಕ್‌ಫರ್ಟ್, ಮುಕರ್ರಮ್ ಅಶ್ರಫ್ ಝಿಯಾ ಸಾಹಿಬ್ ಮುಬಲ್ಲಿಗ್ ಫ್ರೆಂಕ್‌ಫರ್ಟ್ ಹುಝೂರರಿಗೆ ಸ್ವಾಗತ ಕೋರಿದರು ಮತ್ತು ಹಸ್ತಲಾಘವ ಮಾಡುವ ಭಾಗ್ಯ ಪಡೆದರು.

ತಮ್ಮ ಪ್ರೀತಿಯ ಇಮಾಮರಿಗೆ ಸ್ವಾಗತ ಕೋರಲು ಬಂದ ಜಮಾಅತ್ ಬಾಂಧವರು ಫ್ರೆಂಕ್‌ಫರ್ಟ್ ನಗರದ ವಿವಿಧ ಕ್ಷೇತ್ರಗಳಿಂದ ಅಲ್ಲದೆ WIESBADAN GROSS GERAU, HANAU, FLORSHEIM BADHOMDURG DIETZENBACH, "FFENBACH, ESCHBORN, MORFELDEN ಜಮಾಅತುಗಳಿಂದ ಬಂದಿದ್ದರು. ತಮ್ಮ ಪ್ರಿಯ ನೇತಾರರನ್ನು ಸ್ವಾಗತಿಸಲು ಈ ಜನರು ಬಹುದೂರ ಪ್ರಯಾಣ ಬೆಳೆಸಿ ತಲುಪಿದ್ದರು. ಹುಝೂರ್ ತಮ್ಮ ಕೈಯೆತ್ತಿ ಎಲ್ಲರಿಗೂ ಅಸ್ಸಲಾಮು ಅಲೈಕುಂ ಹೇಳಿದರು. ಮತ್ತು ತಮ್ಮ ಎರಡೂ ಬದಿ ಸಾಲುಗಟ್ಟಿ ನಿಂತ ಪ್ರಿಯ ಜನರ ಮಧ್ಯದಿಂದ ತಮ್ಮ ವಸತಿ ನಿಲಯಕ್ಕೆ ತೆರಳಿದರು.

11 ಗಂಟೆ 45 ನಿಮಿಷಕ್ಕೆ ಹುಝೂರ್ ಆಗಮಿಸಿ ಮಗ್ರಿಬ್, ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿ ಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ಭಾಗಕ್ಕೆ ತೆರಳಿದರು.

ಹುಝೂರ್(ಅತಬ)ರವರನ್ನು ಸ್ವಾಗತಿಸಲು ಜರ್ಮನಿಯ ವಿವಿಧ ಜಮಾಅತುಗಳಿಂದ ಹೆಚ್ಚು ಕಡಿಮೆ ಒಂದು ಸಾವಿರದ ಮುನ್ನೂರು ಸ್ತ್ರೀ, ಪುರುಷರು. ತಮ್ಮ ಪ್ರಿಯ ಇಮಾಮರ ನೇತೃತ್ವದಲ್ಲಿ ಮಗ್ರಿಬ್ ಇಶಾಅ ನಮಾಝುಗಳನ್ನು ನಿರ್ವಹಿಸುವ ಭಾಗ್ಯ ಪಡೆದರು. ಅವರಲ್ಲಿ ಕೆಲವರು ಕೆಲ ತಿಂಗಳ ಹಿಂದೆಯೇ ಪಾಕಿಸ್ತಾನದಿಂದ ಬಂದವರಾಗಿದ್ದರು. ಅವರ ಜೀವನದಲ್ಲಿ ಹುಝೂರರ ನೇತೃತ್ವದಲ್ಲಿ ಇದು ಮೊದಲ ನಮಾಝ್ ಆಗಿತ್ತು. ಅವರೆಲ್ಲರೂ ತಮ್ಮ ಈ ಭಾಗ್ಯದ ಮೇಲೆ ಗೌರವ ಪಡುತ್ತಿದ್ದರು. ಮತ್ತು ಕೃತಜ್ಞಪೂರ್ವಕವಾಗಿ ಅಲ್ಲಾಹನಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದರು. ಈ ಪವಿತ್ರ ಹಾಗೂ ಅನುಗ್ರಹಪೂರ್ಣ ಕ್ಷಣಗಳಿಂದ ಅನುಗ್ರಹಿತರಾದವರಿಗೆ ಅದು ಇದು ಒಂದು ಶಾಶ್ವತವಾದ ಜೀವನ ದೊರೆತಂತಾಗಿತ್ತು. ವರ್ಷಾನುಗಟ್ಟಲೆಯ ಅವರ ದಾಹ ತಮ್ಮ ಪ್ರಿಯ ಇಮಮರ ದರ್ಶನಗಳ ಮೂಲಕ ತೀರಿಸಿಕೊಳ್ಳುತ್ತಿದ್ದರು. ಈ ಕ್ಷಣಗಳು ಅವರ ಬದುಕಿನಲ್ಲಿ ಮೊದಲ ಬಾರಿಗೆ ಬಂದಿದ್ದವು. ಅಲ್ಲಾಹನು ಈ ಸುಸಂದರ್ಭ ಮತ್ತು ಅನುಗ್ರಹಗಳನ್ನು ನಮಗೆಲ್ಲರಿಗೂ ಶುಭ ತರುವಂತಾಗಲಿ. **ಆಮೀನ್** (ಬಹಾವಾಲಾ ಅಕ್ಬಾರೆ ಬದರ್ ಉರ್ದು 4 ಜೂನ್ 2015)

**(ಮುಂದುವರಿಯುವುದು)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಆ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

## ಮಹೋನ್ನತನಾದ ದೇವ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ." *(ಕಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)*

**ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಸಹಯೋಗದಲ್ಲಿ ನಡೆಯುತ್ತಿರುವ ನೂರ್ ಆಸ್ಪತ್ರೆಯ ಎಕ್ಸ್‌ರೇ (XRay) ಹಾಗೂ ದಂತ (Dental) ವಿಭಾಗದಲ್ಲಿ ಮಹಿಳಾ ಟೆಕ್‌ನೀಶಿಯನ್ (Lady Technician) ನ ಎರಡು ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.**

ಅರ್ಜಿ ಸಲ್ಲಿಸುವ ಮಹಿಳೆಯರು ಕೆಳಗೆ ನಮೂದಿಸಿದ ಶರತ್ತುಗಳನ್ನು ಪೂರೈಸುವವರಾಗಿರಬೇಕು:–

**ಮಹಿಳಾ ಟೆಕ್‌ನಿಶಿಯನ್ (Lady Technician) ಹುದ್ದೆ ಎಕ್ಸರೇ X Ray ವಿಭಾಗ ನೂರ್ ಆಸ್ಪತ್ರೆ ಖಾದಿಯಾನ್‌ನ ಷರತ್ತುಗಳು:**

1) ಅಭ್ಯರ್ಥಿಯು ಅಧಿಕೃತ ಸಂಸ್ಥೆಯಿಂದ "Diploma in Radiology technology" ಮಾಡಿರಬೇಕು. ಹಾಗೂ Digital technology and Competency In ECG Technology ಅದರಲ್ಲಿ ಕನಿಷ್ಠ 3 ವರ್ಷಗಳ ಅನುಭವ ಪಡೆದಿರಬೇಕು.
2) ಅಭ್ಯರ್ಥಿಗೆ ಉತ್ತಮ Good Communication Skill ನಿರ್ಬಂದವಾಗಿದೆ.

**ದಂತ(Dental) ವಿಭಾಗದಲ್ಲಿ ಮಹಿಳಾ ಟೆಕ್ನಿಶಿಯನ್ (Lady Technician)ನ ಹುದ್ದೆಗಾಗಿ ನೂರ್ ಹಾಸ್ಪಿಟಲ್ ಖಾದಿಯನ್‌ನ ಷರತ್ತುಗಳು:**

1) ಅಭ್ಯರ್ಥಿ ರಿಜಿಸ್ಟರ್‌ಗೊಂಡ ಹಾಗೂ ಮಂಜೂರಿ ಪಡೆದ ಸಂಸ್ಥೆಯಿಂದ Diploma in Dentistry ಮಾಡಿರಬೇಕು. ಮತ್ತು ಅದರಲ್ಲಿ ಕನಿಷ್ಟ ಮೂರು ವರ್ಷಗಳ ಅನುಭವ ಪಡೆದಿರಬೇಕು.
2) ಅಭ್ಯರ್ಥಿಯಲ್ಲಿ ಉತ್ತಮ 'Communication Skill' ನಿರ್ಬಂದವಾಗಿದೆ.

**ಎರಡು ಹುದ್ದೆಯ ಶರತ್ತುಗಳು:–**

1) ಅಭ್ಯರ್ಥಿಯ ವಯಸ್ಸು 22 ರಿಂದ 32 ವರ್ಷಗಳ ಒಳಗಿರಬೇಕು.
2) ಕೇಂದ್ರ ಆಯ್ಕೆ ಸಮಿತಿಯಿಂದ ಏರ್ಪಡಿಸಲಾದ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನಕ್ಕೆ ಕರೆಯಲಾಗುವುದು.
3) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದವರು ನೂರ್ ಹಾಸ್ಪಿಟಲ್ ಖಾದಿಯಾನ್ ಅವರಿಂದ Medical Fitness Certificate ಪ್ರಸ್ತುತ ಪಡಿಸಬೇಕಾಗುವುದು.
4) ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿ, ಖಾದಿಯಾನ್ ಆಗಮನ ನಿರ್ಗಮನದ ಖರ್ಚು ಮತ್ತು ಎಲ್ಲ ವೈದ್ಯಕೀಯ ಖರ್ಚುಗಳನ್ನು ತಾವೇ ವಹಿಸಿಕೊಳ್ಳಬೇಕಾಗುವುದು.
5) ಆಯ್ಕೆಯಾದಲ್ಲಿ ಖಾದಿಯಾನಿನಲ್ಲಿ ವಸತಿ ಸೌಕರ್ಯದ ಜವಾಬ್ದಾರಿ ಅಭ್ಯರ್ಥಿಯದ್ದಾಗಿರುತ್ತದೆ.
6) ಅಭ್ಯರ್ಥಿಯು ನಝೂರತ್ ದಿವಾನ್ ವತಿಯಿಂದ ಜಾರಿಯಾದ ಅರ್ಜಿ ನಮೂನೆಯೊಂದಿಗೆ. ಶೈಕ್ಷಣಿಕ ಅರ್ಹತಾ ಪ್ರಮಾಣಪತ್ರಗಳು, Experience Certificate, ಜನ್ಮ ದಿನಾಂಕದ ದೃಢೀಕರಣ ಪತ್ರ, ಆಧಾರ್ ಕಾರ್ಡ್, ವೋಟರ್ ಐ.ಡಿ., ಜಮಾಅತಿನ ಐ.ಡಿ ಕಾರ್ಡ್‌ಗಳ ದೃಢೀಕೃತ ಫೋಟೋ ಕಾಫಿ ಹಚ್ಚುವುದು ಅನಿವಾರ್ಯವಾಗಿರುತ್ತದೆ.
7) ಬದರ್ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ಎರಡು ತಿಂಗಳ ನಂತರ ಪರೀಕ್ಷೆಯ ತಾರೀಖು ತಿಳಿಸಲಾಗುವುದು.
8) ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ತಮ್ಮ ಭರ್ತಿಗೊಂಡ ಅರ್ಜಿಯ ಮೇಲೆ ತಮ್ಮ ಜಿಲ್ಲಾ ಅಮಿರ್/ಸ್ಥಳೀಯ ಅಮೀರ್/ ಸದರ್/ ಸದರ್ ಲಜ್ನ/ ಮುಬಲ್ಲಿಗ್ ಇನ್‌ಚಾರ್ಜ್‌ರವರ ದೃಢೀಕೃತ ಸಹಿ ಹಾಗೂ ಮೊಹರಿನೊಂದಿಗೆ ಕಳುಹಿಸತಕ್ಕದ್ದು.
9) ಅಭ್ಯರ್ಥಿಯು ಸಂದರ್ಶನಕ್ಕೆ ಬರುವಾಗ ತಮ್ಮ Original, (ಅಸಲು) ಪ್ರಮಾಣಪತ್ರಗಳನ್ನು ಅವಶ್ಯವಾಗಿ ಜೊತೆಯಲ್ಲಿ ತರಬೇಕು.
10) ಅಭ್ಯರ್ಥಿಯು ವಕ್ಫೆನೌ ಆಗಿದ್ದಲ್ಲಿ ಸದರ್ ಅಂಜುಮನ್ ಅಹ್ಮದಿಯಾದ ಯಾವುದೆ ಹುದ್ದೆಗೆ ಅರ್ಜಿ ಸಲ್ಲಿಸುವುದಾದರೆ ಮುಂಚಿತವಾಗಿ ಸಯ್ಯದನಾ ಹುಝೂರ್ ಅನ್ವರ್‌ರವರಿಂದ ಮಂಜೂರಿ ಪಡೆದ ಪತ್ರದ ನಕಲು ಪ್ರತಿ ಲಗತ್ತಿಸುವುದು ಅನಿವಾರ್ಯವಾಗಿರುತ್ತದೆ.
11) ಹುದ್ದೆಗೆ ಸಂಬಂಧಿಸಿದ ಅರ್ಜಿಯನ್ನು ನಝೂರತ್ ದೀವಾನ್‌ನಿಂದ ಪಡೆಯಬಹುದಾಗಿದೆ. ಅರ್ಜಿ ಭರ್ತಿ ಮಾಡಿ ಕೊಟ್ಟ ನಂತರ ಕಾಯಿದೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತಹರೀಕ್ ಜದೀದ್, ಅಂಜುಮನ್ ವಖ್ಫ್ ಜದೀದ್ ಖಾದಿಯಾನಿನ ಸಂಸ್ಥೆಗಳಲ್ಲಿ ನಾಲ್ಕನೆ ದರ್ಜೆಯ ಹುದ್ದೆಗೆ ಸಂಬಂಧಿಸಿದ ವಿಭಾಗದಲ್ಲಿ ಉದ್ಯಾನಪಾಲಕ (ಮಾಲಿ), Care taker, ಅಡುಗೆ ಭಟ್ಟ (ಬಾವರ್ಚಿ) ನಾನ್ ಬಾಯ್ (ರೊಟ್ಟಿ ಮಾಡುವವ), ಖಾದಿವ್ ಮಸ್ಜಿದ್ (ಮಸೀದಿ ಸೇವಕ) ಹುದ್ದೆಗಳನ್ನು ತುಂಬಬೇಕಾಗಿದೆ.**

ಸೇವೆ ಸಲ್ಲಿಸ ಬಯಸುವ ಅಭ್ಯಥಿಗಳು ಕೆಳಗೆ ನಮೂದಿಸಿದ ಶರತ್ತಿನೊಂದಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ಮೇಲ್ಕಾಣಿಸಿದ ಯಾವುದೇ ಹುದ್ದೆ ಪಡೆದಲ್ಲಿ ಖಾದಿಯಾನ್ ಅಥವಾ ಖಾದಿಯಾನಿನ ಹೊರ ವಲಯದ ಎಲ್ಲಿಯಾದರೂ ನಿಯುಕ್ತಗೊಳಿಸಬಹುದಾಗಿದೆ.

**ಶರತ್ತುಗಳು:**

1) ಅಭ್ಯರ್ಥಿಗೆ ಯಾವುದೇ ಶೈಕ್ಷಣಿಕ ಶರತ್ತು ಇರುವುದಿಲ್ಲ.
2) ಅಭ್ಯರ್ಥಿಯ ವಯಸ್ಸು 23 ವರ್ಷಗಳಿಗಿಂತ ಕಡಿಮೆ ಇರುವುದು ಅವಶ್ಯವಾಗಿದೆ.
3. ಜನನ ದೃಢೀಕರಣ ಪತ್ರ (Birth certificate) ಪ್ರಸ್ತುತಪಡಿಸುವುದು ಅನಿವಾರ್ಯವಾಗಿದೆ.
4) ಕೇಂದ್ರ ಆಯ್ಕೆ ಸಮಿತಿಯಿಂದ ನಡೆಸುವ ಸಂದರ್ಶನದಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ಅರ್ಹರೆಂದು ಪರಿಗಣಿಸಲಾಗುವುದು.
5) ನೂರ್ ಹಾಸ್ಪಿಟಲ್ ಖಾದಿಯಾನ್‌ನ ಮೆಡಿಕಲ್ ಬೋರ್ಡಿನಿಂದ ದೊರೆತ ಆರೋಗ್ಯ ವರದಿಯ ಆದಾರದಲ್ಲಿ ಅಭ್ಯರ್ಥಿಯನ್ನು ಸೇವೆಗೆ ಸ್ವೀಕರಿಸಲಾಗುವುದು.
6) ಅಭ್ಯರ್ಥಿಯು ಖಾದಿಯಾನಿಗೆ ಆಗಮಿಸುವ ಹಾಗೂ ನಿರ್ಗಮಿಸುವ ಖರ್ಚು ಸ್ವತಹಃ ನೋಡಿಕೊಳ್ಳುವುದು.
7) ಯಾವುದೇ ಅಭ್ಯರ್ಥಿ ಆಯ್ಕೆಯಾದಲ್ಲಿ ಖಾದಿಯಾನಿನಲ್ಲಿ ತನ್ನ ವಸತಿ ವ್ಯವಸ್ಥೆ ಸ್ವಯಂ ಮಾಡಿಕೊಳ್ಳಬೇಕಾಗುತ್ತದೆ.
8) ಆಸಕ್ತಿಯುಳ್ಳ ಅಭ್ಯರ್ಥಿಗಳು ಅರ್ಜಿ ನಮೂನೆಗಳನ್ನು ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನಿಂದ ಪಡೆಯಬಹುದಾಗಿದೆ.

ಈ ಜಾಹಿರಾತಿನ ಎರಡು ತಿಂಗಳ ಒಳಗೆ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುವುದು **(ನಾಝಿರ್ ದೀವಾನ್ ಖಾದಿಯಾನ್)**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್**

**email: diwan@qadian.in**

**ದೂರವಾಣಿ ಸಂಖ್ಯೆಗಳು : ಕಚ್ಛೆರಿ: 01872–501130, ಮೊಬೈಲ್: 9646351280, 9877138347**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 23 July 2020 Issue No. 28

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹುಝೂರ್‌ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

**(ಬದರ್ ಸಂಚಿಕೆ 27ರ ವರದಿಯ ಉಳಿದ ಭಾಗ)**

ಹುಝೂರ್ ಹೇಳಿದರು. ಅಹ್ಮದಿಯಾ ಜಮಾಅತ್ ಮಾತ್ರ ಇಸ್ಲಾಮಿನ ನೈಜ ಶಿಕ್ಷಣದ ಮೇಲೆ ನಡೆಯುತ್ತ ಇತರರ ಹಕ್ಕುಗಳ ಬಗ್ಗೆ ಗಮನ ಕೊಡುತ್ತಿದೆ. ಅದೇ ಕಾರಣದಿಂದ ಅಲ್ಲಾಹನ ಅನುಗ್ರಹವಿದೆ. ಜಮಾಅತ್ ಅಹ್ಮದಿಯಾ ಇಂದು ಲೋಕದ ಆಪತ್ತಿನಲ್ಲಿರುವ ಜನರ ಸೇವೆ ಮಾಡಲು ಹಾತೊರೆಯುತ್ತಿದೆ. ಜಾತಿ ಮತಗಳ ಭೇದವಿಲ್ಲದೇ ಸೇವೆ ಮಾಡುತ್ತಿದೆ. ಅಲ್ಲದೆ ಜಮಾಅತ್ ನಿರಂತರವಾಗಿ ಸೇವೆಯಲಿ ತೊಡಗಿಸಿಕೊಂಡಿದೆ. ಶಾಲೆಗಳನ್ನು ತೆರೆದು ಜನರ ವಿದ್ಯಾ ದಾಹವನ್ನು ನೀಗಿಸುತ್ತಿದೆ. ಇಲ್ಲಿ ವಿಶ್ವವಿದ್ಯಾಲಯವನ್ನು ನಿರ್ಮಿಸಲಾಗಿದೆ. Aachen ದಲ್ಲಿ University ಇದೆ. ವಾಸ್ತವವಾಗಿ ವಿದ್ಯೆಯು ಲೋಕದ ಪ್ರತಿಯೊಬ್ಬ ವ್ಯಕ್ತಿಯು ಪಡೆಯುವ ಹಕ್ಕು ಹೊಂದಿರುತ್ತಾರೆ. ಇಲ್ಲಿ ಒಂದು University ಸ್ಥಾಪನೆ ಆದದ್ದು, ಈ ನಗರದ ವಿಶೇಷತೆಯಾಗಿದೆ. ನಿಸ್ಸಂದೇಹವಾಗಿ ಇಲ್ಲಿ ಈ ಕಾರಣದಿಂದ ವಿದ್ಯೆಯ ಮಟ್ಟವು ಉತ್ತಮವಾಗುವುದು. ಒಟ್ಟಾರೆ ಅಹ್ಮದಿ ಜಮಾಅತಿನ ಮಾನವೀಯ ಸೇವೆಗೋಸ್ಕರ ಶಾಲೆಗಳನ್ನು ತೆರೆಯುವ ವಿಷಯ ಚರ್ಚೆಯಲ್ಲಿತ್ತು. ಜನರ ಆರೋಗ್ಯ ಸವಲತ್ತುಗಳನ್ನು ನೀಡಲು ಆಸ್ಪತ್ರೆಗಳನ್ನು ತೆರೆಯುತ್ತಿದೆ. ಆಫ್ರಿಕಾದಂತಹ ದೂರದ ಕ್ಷೇತ್ರಗಳಲಿ ನಮ್ಮ ಆಸ್ಪತ್ರೆಗಳು ಮತ್ತು ಶಾಲೆಗಳು ನಡೆಯುತ್ತಿವೆ. ಅದೇ ರೀತಿ ಬೇರೆ ಪ್ರಾಜೆಕ್ಟ್‌ಗಳು ನಡೆಯುತ್ತವೆ. ಈ ಮಾನವೀಯ ಸೇವೆ ಮಾಡಲು ನಮಗೆ ನಮ್ಮ ಧರ್ಮ, ನಮ್ಮ ಶಿಕ್ಷಣವು ನಮಗೆ ಕಲಿಸಿದೆ ಮತ್ತು ನಾವು ಆರಾಧನೆ ಮಾಡುವ ಆ ಅಲ್ಲಾಹನು ನಮಗೆ ಇದನ್ನು ತೋರಿಸಿಕೊಟ್ಟಿದ್ದಾನೆ. ಆದುದರಿಂದ ಅಲ್ಲಾಹನು ಹೇಳಿದನು. ನೀವು ಮಸೀದಿಗಳನ್ನು ಫಲಪ್ರದ ಮಾಡಬಯಸುವುದಾದರೆ, ಮಸೀದಿ ನಿರ್ಮಾಣದ ಹಕ್ಕು ಪಾಲಿಸಬಯಸುವುದಾದರೆ ಜನರ ಹಕ್ಕುಗಳನ್ನು ನೀಡುವವರಾಗಿರಿ ಆಗ ನೀವು ಕೇವಲ ಆರಾಧನೆ ಮಾಡುವವರಾಗಿ ಉಳಿಯುವುದಿಲ್ಲ. ಬದಲು ಮಾನವೀಯತೆಯ ಸೇವೆ ಮಾಡುವವರು ಆಗುವಿರಿ. ಜನರ ಹಕ್ಕುಗಳನ್ನು ನೀಡುವವರಾಗಿರುವಿರಿ.

ಹುಝೂರ್ ಹೇಳಿದರು ಇಲ್ಲಿ ಕಟ್ಟಡ ನಿರ್ಮಾಣದ ಮಾತಾಗಿದೆ. ಇಲ್ಲಿ ಮೇಯರ್ ಸಾಹೇಬರು ಹೇಳಿದರು. ಕಟ್ಟಡ ನಿರ್ಮಿಸುವುದೆಂದರೆ ಇಲ್ಲಿ ವಾಸಿಸಲು ಬಯಸುತ್ತೀರಿ ಎಂದು ಅರ್ಥವಾಗಿದೆ ಎಂದಿದ್ದರು. ಆದರೆ ನಾವು ಕೇವಲ ಇಲ್ಲಿ ವಾಸಿಸಲು ಮಸೀದಿ ನಿರ್ಮಿಸುತ್ತಿಲ್ಲ. ಬದಲು ಈ ಮಸೀದಿ ನಿರ್ಮಾಣದ ಉದ್ದೇಶವು ಅಲ್ಲಾಹನ ಹಕ್ಕುಗಳನ್ನು ಪಾಲಿಸುವವರಾಗಬೇಕು. ಮತ್ತು ಇಸ್ಲಾಮಿನ ನಿಜವಾದ ರೂಪ ಇತರರಿಗೆ ತೋರಿಸುವಂತಾಗಬೇಕು ಸಾಮಾನ್ಯವಾಗಿ ಇಸ್ಲಮಿನ ಚಿತ್ರಣವು ಜನರಲ್ಲಿ ಹೇಗಿದೆ ಎಂದರೆ ಎಲ್ಲಾ ಮುಸ್ಲಿಮರು ಉಗ್ರವಾದಿಗಳು ಎಂದಾಗಿದೆ. ಕೆಲವರು ಪ್ರಕಟ ಪಡಿಸುವುದಿಲ್ಲ. ಆದರೆ ಮನದಲ್ಲಿ ಈ ಆತಂಕ ಹೊಂದಿರುತ್ತಾರೆ. ಆದರೆ ವಾಸ್ತವದಲ್ಲಿ ಇಸ್ಲಾಮ್ ಉಗ್ರವಾದದ ಧರ್ಮವಲ್ಲ. ಆ ಕುರಿತು ಸಂಕ್ಷಿಪ್ತವಾಗಿ ನಾನು ಮಾತನಾಡಿದ್ದೇನೆ.

ಇಸ್ಲಾಮಿನ ನಿಜವಾದ ಶಿಕ್ಷಣವೆಂದರೆ ನಮ್ಮ ಪ್ರಬು ನಮ್ಮ ಪರಿಪಾಲಕನಾಗಿದ್ದಾನೆ. ನಮ್ಮ ಆರಾಧ್ಯ ದೇವನು ನಮಗೆ ಉಪದೇಶಿಸುವುದು. ಎಲ್ಲಿ ನೀವು ನನ್ನನ್ನು ಆರಾಧಿಸುವಿರೋ ಅಲ್ಲಿ ಜನರ ಹಕ್ಕುಗಳನ್ನು ನೀಡಬೇಕಾಗುವುದು. ಬದಲು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿದನು. ಮಸೀದಿಗೆ ಬರುವ ಆರಾಧಕರು ಸರಿಯಾದ ರೀತಿಯಲ್ಲಿ ಜನರ ಹಕ್ಕುಗಳನ್ನು ಪಾಲಿಸದಿದ್ದರೆ ಅವರ ಆರಾಧನೆಗಳನ್ನು ಅವರ ಮುಖದ ಮೇಲೆ ಬಿಸಾಕಲಾಗುವುದು ಅದನ್ನು ಮರುಳಿಸಲಾಗುವುದು. ಈ ಆಡಂಬರದ ಅವರ ಆರಾಧನೆಗಳು ಅವರ ವಿನಾಶಕ್ಕೆ ಕಾರಣವಾಗುವುದು. ಆದುದರಿಂದ ಎಲ್ಲಿಯವರೆಗೆ ಉತ್ತಮ ಗುಣಗಳನ್ನು ಹೊಂದುವುದಿಲ್ಲವೋ ಜನರ ಹಕ್ಕುಗಳನ್ನು ಪಾಲಿಸಲಾಗಿವುದಿಲ್ಲವೋ, ಕೇವಲ ಆರಾಧನೆಗಳು ಸಾಕಾಗುವುದಿಲ್ಲ. ದುದರಿಂದ ಅಹ್ಮದಿಯಾ ಜಮಾಅತ್ ಆ ನಿಜವಾದ ಆರಾಧನೆ ಮಾಡಬಯಸುತ್ತದೆ. ಅಲ್ಲಾಹನ ಆರಾಧನೆ ಜೊತೆಯಲ್ಲಿ ಜನರ ಹಕ್ಕುಗಳನ್ನು ಪಾಲಿಸಬಯಸುತ್ತದೆ.

ಹುಝೂರ್(ಅಬಿಅ) ಹೇಳಿದರು. ಮೇಯರ್ ಸಾಹಿಬರು ಪರಸ್ಪರ ಕೂಡಿಕೊಂಡು ಬಾಳಬೇಕೆಂದರು, ಇದು ಒಳ್ಳೆಯ ಸಮಾಜದ ಲಕ್ಷಣವಾಗಿದೆ. ನಿಸ್ಸಂದೇಹವಾಗಿ ಇದು ತುಂಬ ಒಳ್ಳೆಯ ಮಾತಾಗಿದೆ. ನಾವು ಪರಸ್ಪರ ಒಟ್ಟುಗೂಡಿ ಇರಬೇಕಾಗಿದೆ. ಏಕೆಂದರೆ ಆಗ ಮಾತ್ರ ನಾವು ಧರ್ಮದ ವಾಸ್ತವ ತಿಳಿಯುವವರಾಗುತ್ತೇವೆ. ನಾವು ಮಾನವ ಮೌಲ್ಯಗಳನ್ನು ಎತ್ತಿ ಹಿಡಿಯುವವರಾಗುವೆವು. ಆದುದರಿಂದ ಮಾನವ ಮೌಲ್ಯಗಳನ್ನು ಖಾಯಂಗೊಳಿಸುವುದು ಬಹು ಮುಖ್ಯವಾಗಿದೆ. ಇಂತಹ ತುಂಬ ಒಳ್ಳೆಯ ಹಿತನುಡಿಯನ್ನು ಮೇಯರ್ ಸಾಹಿಬ್ ಹೇಳಿರುವರು. ಅಹ್ಮದಿಯಾ ಜಮಾಅತ್ ಎಲ್ಲರಿಗಿಂತ ಹೆಚ್ಚು ಅದನ್ನು ಮಾಡಲು ಪ್ರಯತ್ನಿಸುತ್ತದೆ ಎಂಬುದು ನನ್ನ ಭರವಸೆಯಾಗಿದೆ.

ಹುಝೂರ್(ಅಬಿಅ) ಹೇಳಿದರು. ನಿಶ್ಚಯವಾಗಿಯೂ ನನ್ನ ಅಭಿಪ್ರಾಯದಲ್ಲಿ ಮೊದಲಿಗಿಂತ ಹೆಚ್ಚು ಈ ಬಗ್ಗೆ ಕೆಲಸ ನಿರ್ವಹಿಸುವರು ಎಂದು. ಇನ್‌ಶಾಅಲ್ಲಾಹ್ ನಾವು ಒಂದು ದೇಶದ ಉತ್ತಮ ನಾಗರಿಕರು ಮಾಡಬಹುದಾದ ಎಲ್ಲ ಒಳ್ಳೆಯ ಕಾರ್ಯಗಳನ್ನು ಮಾಡುವವರಾಗುವೆವು.

ಹುಝೂರ್(ಅಬಿಅ) ಹೇಳಿದರು. ಅದೇ ರೀತಿ Integration ಪ್ರತಿನಿಧಿ ಇಲ್ಲಿ ಬಂದು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತ ಹೇಳಿದರು. ಜರ್ಮನಿಯಲ್ಲಿ ಜರ್ಮನರು ತುಂಬ ವಿಶಾಲ ಮನೋಭಾವನೆಯುಳ್ಳವರಾಗಿದ್ದಾರೆ. ಅದರಿಂದ ತುಂಬ ಧೈರ್ಯ ಪ್ರಾಪ್ತವಾಗುತ್ತದೆ. ಇದು ಸರಿಯಾದ ಮಾತಾಗಿದೆ. ಜರ್ಮನ್ ದೇಶದಲ್ಲಿ ಅಲ್ಲಾಹನ ಅನುಗ್ರಹದಿಂದ ತುಂಬ ದೈರ್ಯವಿದೆ. ಅವರು ಇಲ್ಲಿ ಹಲವು ಸಮುದಾಯಗಳಿಗೆ ಆಶ್ರಯ ನೀಡಿದ್ದಾರೆ. ಈ ಉತ್ತಮ ಗುಣ ಇರುವವರೆಗೆ ಲೋಕದಲ್ಲಿ ನಿಮ್ಮ ಉತ್ತಮ ಮೌಲ್ಯಗಳ ಪ್ರಚಾರವಾಗುತ್ತಿರುವುದು. ಆದರೆ ಅದರ ಲಾಭ ಪಡೆಯಲು ಬರುವ ಸಮುದಾಯಗಳು ಸಹ ತಮ್ಮ ಕರ್ತವ್ಯಗಳನ್ನು ನಿಭಾಯಿಸಬೇಕಾಗುತ್ತದೆ. ನಾನು ಹೇಳುವುದಿಲ್ಲ. ಇಲ್ಲಿ ಬಂದವರು ಬೇಕಾದಂತೆ ಮಾಡಬಹುದೆಂದು. ವಲಸೆ ಬಂದ ಏಷ್ಯದ ಜನರು ಈ ಜರ್ಮನ್ ದೇಶದ ಭಾಗವಾಗಿದ್ದಾರೆ. ಇಲ್ಲಿ ಜನ್ಮ ಪಡೆದ ಮಕ್ಕಳು ಅವರು ಭಾರತದಿಂದ ಬಂದವರಾಗಿದ್ದಾರೆ. ಪಾಕಿಸ್ತಾನದಿಂದ ಬಂದವರಾಗಬಹುದು ಅಥವಾ ಯಾವುದೇ ದೇಶದಿಂದ ಬಂದವರಾಗಿರಬಹುದು. ಆದರೆ ಇಲ್ಲಿ ಹುಟ್ಟಿರುತ್ತಾರೆ, ಇಲ್ಲಿಯ ಭಾಷೆ ಹೇಳುತ್ತಾರೆ. ಇಲ್ಲಿಯ ಒಂದು ಭಾಗವಾಗಿ ಬಿಟ್ಟಿದ್ದಾರೆ. ಅವರು ಸಹ ಕೇವಲ ಭಾಷೆಯವರೆಗೆ ಮಾತ್ರ ಅಲ್ಲ, ಎಲ್ಲಿಯವರೆಗೆ ತನ್ನನ್ನು ತಾನು ಅವರೊಂದಿಗೆ ಬೆರೆತು ಐಕ್ಯಮತದ ಶೌರ್ಯ ತೋರಿಸುವುದಿಲ್ಲವೋ ಅಲ್ಲಿಯವರೆಗೆ ಜರ್ಮನ್‌ರವರು ನಮ್ಮನ್ನು ತಮ್ಮೊಂದಿಗೆ ಸೇರಿಸಿಕೊಳ್ಳುತ್ತಿಲ್ಲ ಎಂದು ಅವರ ಮೇಲೆ ಆರೋಪ ಮಾಡುವುದು ಸರಿಯಾಗುವುದಿಲ್ಲ. ವಲಸೆ ಬಂದವರು ಸಹ ಜರ್ಮನ್ ದೇಶದವರೊಂದಿಗೆ, ಸ್ಥಳೀಯರೊಂದಿಗೆ ಭಾವೈಕ್ಯತೆ ತೋರಿಸಬೇಕಾಗುತ್ತದೆ. ಇನ್‌ಶಾಅಲ್ಲಾಹ್ ಅಹ್ಮದಿಯರಾದವರು ಜರ್ಮನ್ ಅವರ ಹೃದಯ ವೈಶಾಲ್ಯ ಪ್ರತಿಯಾಗಿ ಹೆಚ್ಚು ಹೃದಯ ವೈಶಾಲ್ಯದಿಂದ ವರ್ತಿಸಿ ಸಾಬೀತುಪಡಿಸುವರು. ಪ್ರತಿ ಅಹ್ಮದಿಯು ದೇಶದ ನಿಷ್ಠಾವಂತ ಪ್ರಜೆಯಾಗಿದ್ದಾನೆ ಮತ್ತು ದೇಶದ ಪ್ರಗತಿಗಾಗಿ ಪ್ರಯತ್ನಪಡುವವನಾಗಿದ್ದಾನೆ ಎಂದು.

ಹುಝೂರ್ ಹೇಳಿದರು. ರಾಜ್ಯ ಅಸೆಂಬ್ಲಿಯ ಸದಸ್ಯರು ಆಗಮಿಸಿರುವರು. ಅವರು ಹೂವಿನ ಅಂಗಡಿಯ ವಿವರ ನೀಡಿದರು ಅದು ನಮ್ಮ ಅಹ್ಮದಿಯ ಅಂಗಡಿಯಾಗಿತ್ತು. ಅವರು ಹೂವು ಅರ್ಪಿಸುತ್ತಿದ್ದರು ಎಂದು ಆ ಸಾಹಿಬರು ಉದಾಹರಣೆಯಾಗಿ ಪ್ರಸ್ತುತಪಡಿಸಿ ಇಲ್ಲಿಯ ಜನರಿಗೆ ಹೂವುಗಳನ್ನು ಅರ್ಪಿಸುವ ಪ್ರಯತ್ನ ಮಾಡಿದ್ದಾರೆ. ನಮ್ಮ ಕಡೆಯಿಂದ ಉಗ್ರವಾದ ಆಗಲಿಕ್ಕಿಲ್ಲ ಎಂದು ತೋರಿಸಲು ಈ ಭಾವನೆಗಳನ್ನು ಆಡಿದ್ದಾರೆ. ನಮ್ಮ ಕಡೆಯಿಂದ ಕಲ್ಲುತೂರಾಟ ಆಗುವುದಿಲ್ಲ. ನಮ್ಮ ಕಡೆಯಿಂದ ಖಡ್ಗ ಎತ್ತಲಾಗುವುದಿಲ್ಲ. ಬದಲಾಗಿ ನಾವು

*(ಉಳಿದ ವರದಿ ಪುಟ ಸಂಖೆ 08 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800-103-2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.